
ಕೊರವಂಜಿ



ಸೆಪ್ಟಂಬರ್ ೧೯೪೪

ಮಾಸ ಪತ್ರಿಕೆ

ಸಂಪಾದಕರು :
ಶ್ರೀ|| ರಾ. ಶಿ.

ಚಿತ್ರಕಾರರು :
ಶ್ರೀ|| ಆರ್. ಕೆ. ಲಕ್ಷ್ಮಣ್

ಬರಹಗಾರರು :

ಶ್ರೀ|| ಪಾಠಾಳಿ
ಶ್ರೀ|| ಬುಳ್ಳ
ಶ್ರೀ|| ಕೇಸರಿ
ಶ್ರೀ|| ಗಂಗಾಧರ
ಶ್ರೀ|| ನಾ. ಕ.
ಶ್ರೀ|| ಕೇ. ಫ.
ಶ್ರೀ|| ಪಂಡಿತ್

ಬಿಡಿ ಪತ್ರಿಕೆ -- ಕೇವಲ ಎರಡಾಣೆ

ಶ್ರೀ ನಗೆಯ ಮಾಸ ಪತ್ರಿಕೆ.

ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಕರಟಿಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೨—೦—೦

ಬಿಡಿ ಪ್ರತಿ ಕೇವಲ ಆಣೆ ೦—೨—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ, ಬಹಳ ಸಹಾಯ ಮಾಡಿದಂತಾಗುವುದು.

ವಿಷಯಾನುಕ್ರಮಣಿಕೆ

ಭಾರತೀಯ ಕಾರ್ಮಿಕರಿಂದ

ಭಾರತೀಯ ಬಂಡವಾಳಗಾರರಿಂದ

ಭಾರತೀಯ ಕಲಾಕೌಶಲ್ಯದಿಂದ

ಕೂಡಿರುವುದೇ

ಬೆಂಗಾಲ್ ಲ್ಯಾಂಪ್ಸ್

ತಯಾರಿಕೆಯ ವೈಶಿಷ್ಟ್ಯ

—

ಭಾರತದಲ್ಲೆಲ್ಲಾ ಉತ್ತಮವಾದುದೆಂದು

ಖ್ಯಾತಿಪಡೆದಿದೆ



ಒಂದು ದಿನ

ಅವನು ಕಾಲೇಜಿಗೆ ಹೋಗುವನು

ಈಗಿನಿಂದ ಇನ್ನು 20 ವರ್ಷಗಳಿಗೆ ಅವನು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಲು ಹೋಗುವನು. ವ್ಯಾಪಾರ ಅಥವಾ ಔದ್ಯೋಗಿಕ ಪ್ರಪಂಚದಲ್ಲಿ ವಿಶ್ವವಿದ್ಯಾಲಯದಲ್ಲಿ ತರಪೇತಾದವರನ್ನೇ ಆರಿಸುವರು.

ನೀವು ಬಹು ಸುಲಭವಾದ ಮತ್ತು ಕ್ರಮವಾದ ರೀತಿಯಲ್ಲಿ ಹಣವನ್ನು ಕೂಡಿಡುವುದರಿಂದ ಅವನು ಸಂಸ್ಕೃತಿಯಲ್ಲೂ ಜ್ಞಾನದಲ್ಲೂ.......ಶಾಸ್ತ್ರೀಯದಲ್ಲೂ ಸಾಮಾಜಿಕದಲ್ಲೂ ಸಿದ್ಧತೆ ಹೊಂದಿ ಅಮೌಲ್ಯವಾದ ಜಯವನ್ನು ಪಡೆಯುವನು.

ಅವನ ವಿದ್ಯಾಭ್ಯಾಸಕ್ಕಾಗಿ

ಮೈಸೂರು ಸರ್ಕಾರದ ಜೀವವಿಮಾ ಶಾಖೆಯ ಮೂಲಕ

ಕೂಡಿಡಿ

ಕೆಳಗಿನ ವಿಳಾಸಕ್ಕೆ ಬರೆದರೆ ಸಂತೋಷದಿಂದ ವಿವರಗಳು ಕೊಡಲ್ಪಡುವುವು.

ಸೆಕ್ರೆಟರಿ,

ಮೈಸೂರು ಸರ್ಕಾರಿ ಜೀವವಿಮಾ ಶಾಖೆ, ಬೆಂಗಳೂರು

[ಮೈಸೂರಿನವರಿಗೆಲ್ಲಾ ತೆರದಿದೆ]



ಸಂಪುಟ ೩] ಕೊರವಂಜಿ—ಸೆಪ್ಟಂಬರ್ ೧೯೪೪ [ಸಂಚಿಕೆ ೬

ಕುಹಕಿಡಿಗಳು

ಇಂಗ್ಲೆಂಡಿನ ಆರ್ಥಿಕ ವ್ಯವಸ್ಥೆ ಸರಪರಾಜು ನೋಡಿ ಇಂಗ್ಲೆಂಡಿನ ದೊರೆಗೆ ಚರ್ಚಿಲ್ಲರು ಮೊದಲ ಮಂತ್ರಿ, ರೂಸ್‌ವೆಲ್ಟರು ಎರಡನೆಯ ಮಂತ್ರಿ ಎಂದು ಅಮೇರಿಕನ ಸಹೋದ್ಯೋಗಿಯು ಹೇಳಿದೆ.

—ಇಷ್ಟೇ ಅಲ್ಲ. ಸ್ಮಟ್ಸರು ಮೂರನೆಯ ಮಂತ್ರಿಗಳು—ಇತ್ಯಾದಿ—

✤ ✤ ✤

ಪೋಪರು ಚರ್ಚಿಲ್ಲರನ್ನು ಭೇಟಿಯಾದಾಗ, ನೀವು ದೇವರಲ್ಲಿ ನಂಬಿಕೆ ಇಡಿ ಎಂದರೆಂದೂ, ಚರ್ಚಿಲರು ಆಗಲಿ ಎಂದೊಪ್ಪಿ, ನೀವು ನನ್ನಲ್ಲಿ ನಂಬಿಕೆ ಇಡಿ ಎಂದರೆಂದೂ ಹೇಳಿದರೆಂಬುದು ಶುದ್ಧ ಸುಳ್ಳು.

✤ ✤ ✤

ಇಟಲಿಯಲ್ಲಿ ಮಾತನಾಡುತ್ತಾ ಪ್ರಧಾನಾಮಾತ್ಯ ಚರ್ಚಿಲ್ಲರು ಚತುರ್ ಸ್ವಾತಂತ್ರ್ಯಗಳನ್ನು ವಿಶದೀಕರಿಸಿದರಂತೆ.

—ಯಾಕೋ ಭಾರತವನ್ನು ಮರೆತರೇನೊ—ಅಥವಾ ಮನೇನಮಾರಿ ಪರರಿಗೆ ಉಪಕಾರಿಯೋ—

✤ ✤

ಗಾಂಧಿ ಜಿನ್ನಾ ಭೇಟಿಗೆ ಮುಂಚೆಯೇ ಗುಲ್ಲೋಗುಲ್ಲು

—ಲೀ ಅನ್ನುವುದಕ್ಕೆ ಅವಳೇ ಇಲ್ಲ—ಕೂಸಿನ ಹೆಸರು ಸುಕುಮಾರ—

✤ ✤ ✤

✱

ಇಂಗ್ಲೆಂಡಿನಿಂದ ಭಾರತಕ್ಕೆ ಬರುತ್ತಿರುವ ಸಮಿತಿಗಳನ್ನು ನೋಡಿದರೆ, ಸಮಿತಿಗಳವರು ನಮ್ಮ ದೇಶದಲ್ಲಿರುವ ಪ್ರಾಮುಖ್ಯ ಸಲಕರಣೆಗಳ ಅಂದಾಜು ಪಟ್ಟಿ ತಯಾರಿಸುವುದನ್ನು ಕಂಡರೆ, ಯುದ್ಧ ಮುಗಿಯುತ್ತಲೇ ಬಂದಿರಬೇಕು ಎನ್ನಿಸುತ್ತದೆ.

◆ ◆ ◆

ರೆಕ್ಕೆ ಬಾಂಬುಗಳ ಹಾವಳಿ ಕಡಿಮೆಯಾಗಿದೆಯಂತೆ—

—ಆದರೇನು ಪುಕ್ಕಲು ಸೈನಿಕರು ಕಡಿಮೆಯಾಗಬೇಕು.

◆ ◆ ◆

ಈಗ ನಡೆಯುತ್ತಿರುವ ಯುದ್ಧವನ್ನು ತನ್ನ ಹೆಸರಿನಲ್ಲಿ ಕರೆಯಬೇಕೆಂದೂ, ಹಾಗಾದರೆ ಯುದ್ಧದ ಖರ್ಚನ್ನೆಲ್ಲಾ ತಾನೇ ವಹಿಸುವುದಾಗಿಯೂ ಒಬ್ಬ ಅಮೇರಿಕನ್ ಕೋಟ್ಯಾಧೀಶ್ವರನು ಹೇಳಿದನೆಂಬುದು ಸುಳ್ಳಂತೆ.

◆ ◆ ◆

ವೈದ್ಯರೊಬ್ಬರು ಗೆಣಸಿನಿಂದ ಹೇಗೆ ಪುಷ್ಟಿಕರವಾದ ಆಹಾರವನ್ನು ತಯಾರಿಸಬಹುದೆಂದು ವಿಶದೀಕರಿಸಿದ್ದಾರೆ:

"ಅಚ್ಚೇರು ಬೆಣ್ಣೆ ತೆಗೆದುಕೊಂಡು..........."

—ಹೌದು, ಯಾರಿಂದ? ಹೇಗೆ? ಎಲ್ಲಿ?

◆ ◆ ◆

ಟಿಬೆಟ್ ಜನರು ಬೆಣ್ಣೆಯನ್ನು ತಮ್ಮ ಮುಖಕ್ಕೆ ಬಳಿದುಕೊಳ್ಳುತ್ತಾರಂತೆ.

—ಅನಾಗರಿಕರು! ನಾವು ಕಿವಿಯಲ್ಲಿ ಮಾತ್ರ ಕೇಳುತ್ತೇವೆ.

◆

ಚರ್ಚಿಲ್ಲರ ಹಳೆಯ ಸ್ನೇಹಿತರೆಲ್ಲರೂ ಹಾಗೇ ಇದ್ದಾರೆಂದು ಸಹಪತ್ರಿಕೆಯು ತಿಳಿಸುತ್ತದೆ.

—ಹೌದು! ಇದ್ದ "ಹಾಗೇ" ಇದ್ದಾರೆ.

◆ ◆ ◆

ಮೊನ್ನೆ ನ್ಯಾಯಾಸ್ಥಾನದಲ್ಲಿ ಒಬ್ಬ ಸಾಕ್ಷಿ ತನ್ನ ಮೊದಲನೆಯ ಇಬ್ಬರು ಮಕ್ಕಳು ಕೆಲಸದಲ್ಲಿರುವರೆಂದೂ, ಮೂರನೆಯವನು ಸರಕಾರಿ ನೌಕರನೆಂದೂ ಹೇಳಿದನಂತೆ.

◆ ◆ ◆

—o—

ಉ ರಿ ಗಾ ಳು

ಭಾರತದ ಭವಿಷ್ಯತ್ತನ್ನು ಚರ್ಚಿಸುವಾಗ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ೨೦, ೩೦ ಜನರು ಮಾತ್ರ ಹಾಜರಿರುತ್ತಾರೆ......ಅಂದರೆ, ಅಲ್ಲಿ ಜಮಖಾನೆ ಸುತ್ತಿಡಲು ಅಷ್ಟು ಜನರಿದಾರೆ ಅಂದಹಾಗಾಯಿತು.

◆ ◆ ◆

ಅಮೆರಿಯವರನ್ನು ಅಧಿಕಾರದಿಂದ ತೆಗೆದುಹಾಕಲು ಒದಗಿರುವ ಮುಖ್ಯವಾದ ತೊಂದರೆ ಏನೆಂದರೆ, ಅವರಷ್ಟೇ ಸೊಗಸಾಗಿ "ಇಲ್ಲ" ಎಂದು ತಲೆ ಅಲ್ಲಾಡಿಸುವ "ಕೋಲೇಬಸವ" ಇಂಗ್ಲೆಂಡಲ್ಲಿಲ್ಲವಂತೆ.

◆ ◆ ◆

"ನಮಗೆ ರೇಷನ್ ಕೊಡದಿದ್ದರೂ ಚಿಂತೆ ಇಲ್ಲ; ಊರಿನ ಮಕ್ಕಳಿಗೆ ಕೊಡಿ, ಸಾಕು" ಎಂದು ಚಾಮರಾಜಪೇಟೆ ಬೀದಿ ನಾಯಿಗಳು ಬೊಗಳುತ್ತಿವೆಯಂತೆ.

◆ ◆ ◆

"ಹೊಟ್ಟೆಯೊಳಗಿನ ಮಗು, ಗಂಡಾಗಿ ಜನಿಸಲು ನೀಲಿಪುಡಿ; ಹೆಣ್ಣಾಗಿ ಜನಿಸಲು ಬಿಳಿಪುಡಿ" ಎಂದು ಆಸ್ಟ್ರೇಲಿಯಾದಲ್ಲಿ ಒಬ್ಬರು ಜಾಹಿರಾತು ಮಾಡಿದಾರೆ—ಈ ಪುಡಿಗಳ ಉಪಯೋಗದಿಂದ ಶೇಕಡ ೫೦ ರಷ್ಟು ನಿರೀಕ್ಷಿಸಿದಂತಾಗಿದೆಯಂತೆ.

◆ ◆ ◆

"ವಾಲ್ಮೀಕಿ ತನ್ನ ರಾಮಾಯಣದಲ್ಲಿ ರಾಮನ ಸಹಾಯಕ್ಕೆ ನಿಂತ ಕನ್ನಡಿಗರನ್ನು ಕಪಿ ಕರಡಿ ಎಂದು ಕರೆದಿರುವನು" (ಪ್ರಗತಿ ಸಾಹಿತ್ಯ) ....ಕಪಿ ಕರಡಿಗಳಿಗೆ ಈ ವಿಷಯ ಗೊತ್ತಾದರೆ, ಋಷಿಗಳ ಗತಿ ಏನಪ್ಪ!

◆ ◆ ◆

ಗಾಂಧಿಯವರ ಪತ್ರಗಳನ್ನೆಲ್ಲ ವೈಸ್ರಾಯರು ಒಂದೇ ಕಣ್ಣಿಂದ ಓದುತ್ತಾರೆ ಎಂಬ ವದಂತಿ ಇದೆ......ಸದ್ಯ:, ಕಾಣದ ಕಣ್ಣಿಂದ ಅಲ್ಲ, ತಾನೆ?

◆ ◆ ◆

"ನಮ್ಮ ಆತ್ಮಕ್ಕೆ ಇಕ್‌ಬಲ್ ಒಂದು ಕಣ್ಣು! ಟಾಗೋರ್ ಒಂದು ಕಣ್ಣು!" (ಜಿನ್ನಾರವರು). "ಏಕಾಕ್ಷೀ ಕುಲನಾಶಿನಿ"

✤ ✤ ✤

"ಕೊಚ್ಚಿನ್ ಸಂಸ್ಥಾನದಲ್ಲಿ ಈಗ ಗ್ರಾಮಪಂಚಾಯಿತಿಗಳನ್ನು ಆರೋಗ್ಯ ಇಲಾಖೆಯಿಂದ ಪ್ರತ್ಯೇಕಿಸಿರುವರು" (ಪತ್ರಿಕೆ) ನಮ್ಮಲ್ಲಿ ಇವೆರಡರ ಸಂಬಂಧ ತಪ್ಪಿಹೋಗಿ ಅನೇಕ ವರ್ಷಗಳಾದುವು.

✤ ✤ ✤

"ಸರ್ಕಾರದವರು ಒತ್ತಾಯಪಡಿಸಿದಾಗ ಎಲ್ಲೋ ಅಡಗಿದ್ದ 270 ಕೋಟಿ ಗಜ ಬಟ್ಟೆ ಹೊರಕ್ಕೆ ಬಂತು!" (ಪ್ರಕಟನೆ) ಅದಕ್ಕೇ ಇರಬೇಕು, ಮನೆಗಳಲ್ಲಿ ಯಾರಿಗೂ ಉಡುವುದಕ್ಕಿಲ್ಲದೆ ಹೋದದ್ದು,

✤ ✤ ✤

ಮಲಬಾರಿನ ದೇವಸ್ಥಾನಗಳಿಗೂ ರೇಷನ್‌ಕಾಟ ತಗುಲಿವೆ. ನೈವೇದ್ಯಕ್ಕೆ ಕೊಡುವ ಅಕ್ಕಿಯನ್ನು ಆಯಾಸ್ಥಳದ ಮನುಷ್ಯರಿಗೆಷ್ಟೋ ಅಷ್ಟಕ್ಕೇ ಇಳಿಸುತ್ತಾರಂತೆ....ಹಾಗಾದರಿನ್ನು ಮಳೆಬೆಳೆ ಸರಿಯಾಗಿ, ಯುದ್ಧನಿಂತು, ಶಾಂತಿಸುಭಿಕ್ಷಗಳು ಬೇಗ ನೆಲೆಗೊಳ್ಳುತ್ತೆ.

✤ ✤ ✤

ಇಪ್ಪತ್ತು ವರ್ಷಗಳ ಹಿಂದೆ ಮನುಷ್ಯರು ಮರಗಳಲ್ಲಿ ವಾಸಿಸುತ್ತಿದ್ದರಂತೆ. ಆಗಲೂ ಮನೆಗಳು ದುರ್ಲಭವೆಂದು ನಮಗೆ ತಿಳಿದಿರಲಿಲ್ಲ

✤ ✤ ✤

ದನ, ಕುರಿ, ನಾಯಿ, ಕೋಳಿಗಳಿಗೂ ಸಹ ಮೋಟಾರುಗಳ ವೇಗ ಮತ್ತು ಅಪಾಯ ತಿಳಿದಿದೆ ಎಂದು ಒಂದು ಪತ್ರಿಕೆಯಲ್ಲಿದೆ. ಸದ್ಯ! ಇನ್ನು ತಡವಿಲ್ಲದೆ ಈ ತಿಳಿವಳಿಕೆ ಮೋಟಾರ್ ನಡೆಸುವವರಿಗೂ ಬರಬಹುದಲ್ಲ!

✤ ✤ ✤

ಮೋಟಾರುಗಾರನ ಅನುಮತಿ ಇಲ್ಲದೆ ಕೆಲವು ದೂರ ರಸ್ತೆಯಲ್ಲಿ ತಳ್ಳಿಸಿಕೊಂಡನೆಂಬ ಅಪಾದನೆಮೇಲೆ ಒಬ್ಬ ಸೈಕಲ್‌ಗಾರನಿಗೆ ಜುಲ್ಮಾನೆ ವಿಧಿಸಲಾಗಿದೆ.

✤ ✤ ✤

ಹೊಸ ಮಾನವಮಿ ಪದ

೧

ಆಶ್ವಯುಜ ಶುದ್ಧ ಮಾನವಮಿ ಬರಲೆಂದು
ಶಾಶ್ವತದಿ ಹರಸಿದೆವು ಬಾಲಕರು ಬಂದು
ಈಶ ನಿಮ್ಮೊಲೆಗಳಿಗೆ ಸೌದೆ ಕೊಡಲೆಂದು
ಲೇಸಾಗಿ ಹರಸಿದೆವು ಬಾಲಕರು ಬಂದು

೨

ಕಣಲಂಗ ಕುಪ್ಪಸ ನಿಮಗಾಗಲೆಂದು
ಹಣದ ಫಂಡಿಗೆ ಚೋರಿ ಆಗದಿರಲೆಂದು
ದಿನದಿನಕೆ ಮನೆವೆಚ್ಚ ಹೆಚ್ಚದಿರಲೆಂದು
ಅನುದಿನವು ಹರಸಿದೆವು ಬಾಲಕರು ಬಂದು

೩

ಸಕ್ರೆ ನೆಲ್ಲೂರ್‌ಸಣ್ಣ ನಿಮಗಾಗಲೆಂದು
ಅಕ್ರಯಿಂ ಸಾಹೇಬ ನಿಮಗೊಲಿಯಲೆಂದು
ಛತ್ರಿ ಚಪ್ಪಲಿಗಳೆಲ್ಲ ಉಳಿದಿರಲಿ ಎಂದು
ಆರ್ತಿಯಿಂ ಹರಸಿದೆವು ಬಾಲಕರು ಬಂದು

೪

ಮಳೆಬಂದು ಬೆಳೆಬೆಳೆದು ಉರಿತಣಿಯಲೆಂದು
ತಿಳಿಜಲವದುಕ್ಕಿ ನಲ್ಲಿಯಲಿ ಬರಲೆಂದು
ನಳಿನಮುಖಿಯರು ಬಾಗಿಲಬಡಿಯದಿರಲೆಂದು
ಇಳೆಯೊಳಗೆ ಹರಸಿದೆವು ಬಾಲಕರು ಬಂದು

೫

ಆಯುರಾರೋಗ್ಯಗಳು ನಿಮಗಾಗಲೆಂದು
ಶ್ರೆಯಸ್ಸು ತಲೆಪಿತ್ತ ಹೆಚ್ಚುತಿರಲೆಂದು
ರಾಯರಿಗೆ ನಂಟಭಯ ತೊಲಗಲೆಂದು
ಪ್ರೇಯದಿಂ ಹರಸಿದೆವು ಬಾಲಕರು ಬಂದು

—ಪಾಟಾಳ.



(ನಾಯಿ ಜಗಳ ಕಂಡ ಕೂಡಲೆ)...........— ಈಗ ಜ್ಞಾಪಕಕ್ಕೆ ಬಂತು ; ನಿಮಗೂ ನಿಮ್ಮ ನೆರೆಮನೆ ನಾಗಪ್ಪನವರಿಗೂ ಏನೋ ಮನಸ್ತಾಪಾಂ ತಂದ್ರಲ್ಲಾ ಅದೇನು ?

ಹಂಗ್ಹಂಗೇನೆ !

ನಾನು ಅನ್ಕೊಂಡಿದ್ದು
ಅವಳಂದಿದ್ದು
ನಂಗೂ ಅವಳ್ಗೂ ಹಂಗ್ಹಂಗೇನೆ
ಹದಿನೈದ್ದಿನದಿಂದೀಚ್ಗೆ
ಸುಂಸುಂಗೇನೆ ಸಿಟ್ಮಾಡ್ಕೊಂಡು
ಮನ್ಸೇ ಇಲ್ದೆ ಮಾತ್ಗೆ ! ||೧||

ದುಡಿದೂ ದಣಿದೂ ಮನೇಗೆ ಬಂದ್ರೆ
ಜೀತ ಮಾಡೋ ಗಂಡ್ಸು,
ನಗ್ತ ನಗ್ತ ಮಾತಾಡ್ಬಾರ್ದ
'ಗರತಿ' ಯಾದೋಳ್ಹೆಂಗ್ಸು ? ||೨||

ಓದ್ಕೊಂಡ್, ಗೀಚ್ಕೊಂಡ್ ಹಾಡ್ಕೊಂಡ್ ಕುಂತ್ರೆ
'ಹೆಂಡ್ತಿ' ಅನ್ನೊ ಹೆಂಗ್ಸು,
ಹಲ್ ಹಲ್ ಕಿರ್ಕೊಂಡ್ ನೇಗ್ತಿರ್ಬೇಕಾ
'ಗೈರತ್ತ'ರೂ ಗಂಡ್ಸು ? ||೩||

ಹೊತ್ಗೊತ್ತಿಲ್ದೆ ಹಾದೀ ಬೀದೀ
ಅಲ್ಕೊಂಡ್ ಬಂದ್ರೆ ಗಂಡ್ಸು
ಒಲ್ದು, ನಲ್ದು, ಹಲ್ ಹಲ್ ಕಿರ್ಕೊಂಡ್!
ನಗ್ಬೇಕಾ ಹೆಂಗ್ಸು. ||೪||

ಅಲೆಯೋಕ್ ನಲಿಯೋಕ್ ಅಭ್ಯಾಸ್ವಿಲ್ದೆ
ಗರತಿಯಾದ ಹೆಂಗ್ಸು,
ಮನೇಲ್ಸುಮ್ನೆ ಓದ್ಕೊಂಡ್ ಕುಂತ್ರೂ
ಅದ್ನೂ ಸಹಿಸದು ಗಂಡ್ಸು !! ||೫||

ಧಣೀತಾವು, ಚಾಕ್ರಿ ನೋವು ಸಹಿಸ್ಕೊಂಡ್
ಬರ್ತಾನ್ಗಂಡು,
'ಮನೆಯೋಳ್ಕೊಕನ್ನೋಡಿದ್ರೇನೇ
ಜೀವಕ್ಕಾರಾಂ' ಎಂದು :
ಹೆಂಗಿರಬೇಕಾ ಗಂಡಿನ ಮನ್ಸು
ಮೌನದ್ಮೊಕಾನ್ಕೊಂಡು ?! ||೬||

ಸರ್ಕ್ಕಾರ್ ಚಾಕ್ರಿ, 'ಸಾಹೇಬ್' ನೌಕ್ರಿ
ಮಾಡ್ಕೊಂಡ್ಬರ್ತದೆ ಗಂಡು,
ಸಂಸಾರ್ ನೌಕ್ರಿ, ಮಕ್ಕಳ ಚಾಕ್ರಿ
ಮುಗಿಸ್ಕೊಂಡೋತ್ತದೆ ಹೆಂಣು; ||೩||

ಹಿಂದ್ಕುಂದ್ ನೋಡ್ದೆ ಮುನ್ಕೊಂಡ್ಬಿಟ್ರೆ
'ಗೈರತ್ತಿ'ರೋ ಗಂಡ್ಸು,
ನಗ್ತ, ನಗ್ತ ನೆಗೆದಾಡ್ಬೇಕಾ
'ಸಿಯ್ಯತ್ತಿ'ರೋ ಹೆಂಗ್ಸು?! ||೮||

ಗಂಡ ಹೆಂಡ್ತಿ ಆದರೇನಂತೆ
ಹೊಂದಾಣ್ಕೆಲ್ಲದಮೇಲೆ,
ಏನಾಗ್ತೈತೆ ಜೋರಾಗ್ನಡದ್ರೆ
(ಬಾಳೆ) ಹಣ್ಣಿನ ಸಿಪ್ಪೆಮೇಲೆ?! ||೯||

—ಬುಳ್ಳ.

———o———

ಗಣೇಶ

ಗಣೇಶ ಬಂದ;
ಕಾಯಿ ಬೆಲೆ ಕೇಳಿದ,
ಖಾಲಿ ಒಲೆ ನೋಡಿದ,
ಹೊಟ್ಟೆಯೊಳಗೆ ತಾಳ,
ಸಿಟ್ಟು ಬಂತು ಭಾಳ,
ಚಿಕ್ಕ ಕೆರೆ ಮಾರ್ಗವಾಗಿ
ದೊಡ್ಡ ಕೆರೆಯಲ್ಲಿ ಮರ್ಗಯ!

———o———

ನವೀನ ಗಾದೆಗಳು

(ಮಹಿಳಾ ಸಮಾಜಗಳಿಗೆ ಸಂಬಂಧಿಸಿದ್ದು)

ಗಂಡ ವರ್ಗ, ಹೆಂಡತಿ ರಾಜೀನಾಮೆ

ಸಾವಿರರೂಪಾಯಿ ಸಂಬಳದಾರರು, ಮೂರು ತಿಂಗಳು ಬಾಕಿದಾರರು

ಸೀರೆ ನೋಡಿ ಸೀಟ್‌ಹಾಕಿ; ಮಾಲೆ ನೋಡಿ ಮಾಲೆ ಹಾಕಿ

ಮಕ್ಕಳಿಗೆ ಶಿಶುವಿಹಾರ; ದೊಡ್ಡವರಿಗೆ ಉಪಾಹಾರ

ಹಾಡು ಹೇಳುವವರು ನಾವು! ಹಾಳು ತುಂಬುವವರೂ ನಾವೇಯೋ?

ಹೆಂಗಸಿನ ನಾಲಿಗೆಗೆ ಹಿಂದಿಯೇ ಮುದ್ದು; ಗಂಡಸಿನ ಕಿವಿಗೆ
ಕನ್ನಡವೇ ಮುದ್ದು

ಇಪ್ಪತ್ತರವರೆಗೆ 'ಲೋ' ಲಕ್, ಆಮೇಲೆ 'ಹೈ' ಲಕ್

ಸಂಕಟ ಬಂದಾಗ ವೆಂಕಟಮ್ಮನವರೇ! ಹಬ್ಬ ಬಂದಾಗ, ಸುಬ್ಬಮ್ಮನವರೇ!

ಸೇರು ಸೇರುತ್ತಾ ಮೆಂಬರು; ಬರಬರುತ್ತಾ ನಂಬರು

ನೂರಿರೋರೆಲ್ಲ ಕುರ್ಚೀಲಿ: ಕಾರಿರೋರೆಲ್ಲ ಕಮಿಟೀಲಿ

—ಶ್ರೀ॥ ಕೇಸರಿ,

೫-೯-೧೯೪೪ ನೇ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಕಗಡಿ ಕೃಷ್ಣಮಾಚಾರ್‌ರವರ ಸಂಗೀತ. ಆಮೇಲೆ ಎರಡು ವಾರಗಳವರೆಗೆ ಅಗತ್ಯ ರಿಪೇರಿ ನಡೆಯಬೇಕಾಗಿರುವುದರಿಂದ ಟೌನ್ ಹಾಲನ್ನು ಯಾರಿಗೂ ಬಾಡಿಗೆಗೆ ಕೊಡುವಹಾಗಿಲ್ಲ.

ಹರಿತ

ನೂರಾರು ವರ್ಷಗಳ ಹಿಂದೆ ವರಾಂಡೋ ಎಂಬ ಚಕ್ರವರ್ತಿ ಜಪಾನನ್ನು ಆಳುತ್ತಿದ್ದಾಗ ಆಸ್ಥಾನದ ಅರವತ್ತು ಮೂರನೆಯ ಮಹಾದಂಡಾಧಿಪತಿ ಜಿ ಜಿ ರಿ ಯನ್ನು ಶಿರಚ್ಛೇದನಮಾಡುವಂತೆ ಹುಕುಂ ಕೊಡಲಾಯಿತು. ಆತನ ವಧೆಗಾಗಿ ನಿರ್ಧರಿಸಿದ ಕಾಲ ಕಳೆಯಿತು. ಚಕ್ರವರ್ತಿಗಳು ಸಿಂಹಾಸನಸ್ಥರಾಗಿ ತಲೆದೂಗುತ್ತಿದ್ದರು. ಆಗ, ಅವರೆದುರಿಗೆ ಅದೇ ದುರಾತ್ಮನು ಕಾಣಿಸಿಕೊಂಡು ಕಾಲಿಗೆ ಬಿದ್ದನು. "ಲೋ! ಭಂಡ ಕಾರ್ಕೋಟಕಾ! ಮಟಮಟಮಧ್ಯಾಹ್ನ ಮಾರ್ಕೆಟ್ ಚೌಕದಲ್ಲಿ ನಿನ್ನ ತಲೆಯನ್ನು ಹೊಡೆದು ಬೀಳಿಸಬೇಕೆಂದು ನಾನು ಆಜ್ಞಾಪಿಸಿದಾಗ್ಯೂ........" ಎಂದು ರೇಗಿದರು. ಆಗ ಆತ, "ಮಾರ್ತಾಂಡಮಂಡಲಾಕಾರ! ತಮ್ಮ ವದನಾರವಿಂದದಿಂದ ಹೊರಬಂದದ್ದು ದಿಟ. ಆದರೆ, ತಮ್ಮ ಆಜ್ಞಾಕಿರಣಗಳಿಗೆ ಕಿಲುಬು ಹಿಡಿಸಿ, ಆ ಕೊಲೆಗಾರನು ನನ್ನ ಕಂಠವನ್ನು ಛೇದಿಸದೆ ನನ್ನನ್ನು ಳಿಸಿ ಕಳುಹಿಸಿದನು. ತನ್ನ ಖಡ್ಗದಿಂದ ಅವನು ನನ್ನ ಕಂಠದ ಹಿಂಭಾಗವನ್ನು ಮೆಲ್ಲಗೆ ಮುಟ್ಟಿದ, ಅಷ್ಟೆ" ಎಂದು ಅಂಗಲಾಚಿದನು.

ಚಕ್ರವರ್ತಿಗಳು ಕೊಲೆಗಾರನನ್ನು ಕರೆಸಿದರು...."ಲೋ! ಗೂನು ಬೆನ್ನಿನ ಗುಡಾಣ! ಛೇದಿಸಬೇಕಾದ ಕಂಠವನ್ನ ಕತ್ತಿಯಿಂದ ಮುಟ್ಟಿ ಕಳುಹಿಸಿದೆಯಾ, ಕಡುಪಾಪೀ!" ಎಂದು ಗದರಿಸಿದರು. "ಭಾನುಕೋಟಿ ಪ್ರದೀಪಾ! ದುರಾತ್ಮನಾದ ನಿಮ್ಮ ಆ ದಂಡಾಧಿಪನು ಮೂಗು ಹಿಡಿದು ಚೆನ್ನಾಗಿ ಸೀನಲಿ" ಎಂದು ಅವನು ಕೇಳಿಕೊಂಡ. ಹಾಗೆಯೇ ಅಪ್ಪಣೆ ಆಯಿತು. ಹಾಗೆಯೇ ಅವನು ಸೀತ, ಹರಿತವಾದ ಕತ್ತಿಯಿಂದ ಆಗಲೇ ಕತ್ತರಿಸಿರಬಹುದಾದ ಅವನ ಶಿರಸ್ಸು ಕೆಳಗೆ ಬೀಳುವುದೆಂದು ಎಲ್ಲರೂ ಕುತೂಹಲದಿಂದ ನೋಡುತ್ತಿದ್ದರು ಏನೂ ಆಗಲಿಲ್ಲ! ತಲೆ ಇದ್ದಲ್ಲೇ ಇತ್ತು! ಕೊಲೆಗಾರನ ಮುಖದಲ್ಲಿ ಬಿಳುಪೇರಿತು. ಭಯದಿಂದ ಅವನು ಕಕವಿಕ ನೋಡಿದನು. ಕೈಕಾಲುಗಳು ನಡುಗ ತೊಡಗಿದುವು.

"ಅಯ್ಯೋ ನನ್ನ ಹಾಳು ಹುಳುಬಾಳೇ! ಅಯ್ಯೋ! ನನ್ನ ಸತ್ಯಕತ್ತಿ ಮರೆಸೆಯೋ?" ಎಂದು ಅವನು ತನ್ನನ್ನು ತಾನೇ ಶಪಿಸಿಕೊಂಡನು.

ಆಮೇಲೆ, ಸಿಂಹಾಸನದ ಕಡೆ ತಿರುಗಿ, "ಅನಾದಿ ಆದಿತ್ಯನೇ! ಮುಂಡಿ ಬಗ್ಗಿದ್ದ ಆತನ ಕತ್ತನ್ನು ಕತ್ತರಿಸಲು ನಾನು ಕತ್ತಿಬೀಸಿದಾಗ, ನನಗೆ ತಿಳಿಯದೆಯೇ, ಅದು ನನ್ನ ಕತ್ತನ್ನೇ ಕತ್ತರಿಸಿ ಬಿಟ್ಟಿದೆ. ಆದ್ದರಿಂದಲೇ ಅದು ಈತನ ಕಂಠವನ್ನು ಛೇದಿಸಲಿಲ್ಲ!" ಎಂದು ಹೇಳಿ, "ಇಕೊ! ನನ್ನ ಚಾಕರಿಗೆ ರಾಜಿನಾಮೆ!" ಎನ್ನುತ್ತಾ, ಜುಟ್ಟು ಹಿಡಿದೆತ್ತಿ, ತನ್ನ ತಲೆಯನ್ನು ವಿನಯಪೂರ್ವಕವಾಗಿ ಚಕ್ರವರ್ತಿಗಳ ಪಾದತಲದಲ್ಲಿ ಮಂಡಿಸಿದ. ಚಕ್ರವರ್ತಿಗಳು ಭೃತ್ಯನ ಕರ್ತವ್ಯನಿಷ್ಠೆಗಾಗಿ ತಲೆದೂಗಿದರು.

—ಗಂಗಾಧರ.

ಈ ಪ ರಿ ಯ ಸೊ ಬ ಗು

ನರಹರಿ ಭಾಗವತರು ಬೆವರೊರೆಸಿಕೊಂಡು, ಸಭಿಕರು ಕಳುಹಿಸಿಕೊಟ್ಟ ಚೀಟಿಗಳನ್ನೆಲ್ಲ ಒಂದೊಂದಾಗಿ ನೋಡಿದರು. ನೋಡುತ್ತಾ ನೋಡುತ್ತಾ ಅವರ ಕಣ್ಣುಗಳು ಕಳೆಗುಂದಿದುವು. ನಿರಾಶೆಯ ಮಂಕು ಕವಿದು ಮುಖವೆಲ್ಲ ಕಪ್ಪ ಗಾಯಿತು. ಅದುವರೆಗೂ ಅವರಲ್ಲಿ ತುಂಬಿ ತುಳುಕಾಡಿದ ರಾಗ ಸುಧಾರಸ ಒಮ್ಮೆಲೆ ಇಂಗಿತು. ಹಣೆಯಮೇಲೆ ಆಳವಾದ ನೀಳವಾದ ಮೂರು ಗೆರೆಗಳು ಎಲ್ಲಿಂದಲೋ ಬಂದಿಳಿದುವು. ಪಕ್ಕವಾದ್ಯದವರನ್ನು ಅವರು ಬಹು ಸಂಕಟದಿಂದ ಒಂದು ಸಲ ನೋಡಿ ತಲೆತಗ್ಗಿಸಿದರು. ಆದರೆ, ಅವರು ಹೊಸಬರು; ಬೆಂಗಳೂರಿ ನಲ್ಲಾದ ಆ ದಿನದ ಕಚೇರಿಗೋಸ್ಕರ ಆಕಸ್ಮಿಕವಾಗಿ ಅಳವಡಿಸಿಕೊಂಡವರು. ಭಾಗ ವತರ ಅಂತರಂಗದ ತುಮುಲವನ್ನು ಅವರೇನು ಬಲ್ಲರು ? ಭಾಗವತರು ತಮ್ಮ ಮುಂದಿನ ಮಂದಿರದಲ್ಲಿ ಕಿಕ್ಕಿರಿದು ತುಂಬಿದ್ದ ಸಂಗೀತಾಭಿಮಾನಿಗಳ ಸಮೂಹವನ್ನು ಕಂಬನಿತುಂಬಿದ ಕಣ್ಣುಗಳಿಂದ ವೀಕ್ಷಿಸಿದರು. ಅಲ್ಲಿದ್ದ ರುಮಾಲುಗಳ ಸಾಲುಗಳೂ ಬಣ್ಣಬಣ್ಣದ ಸೀರೆಗಳೂ ಮಸಕುಮಸಕಾಗಿ ಕಂಡುವು. ಇದ್ದಕ್ಕಿದ್ದಹಾಗೆ ಅವರು ಮೌನವಾದದ್ದನ್ನು ಕಂಡು ಸಭಿಕರ ತಾಳ್ಮೆ ಎಲ್ಲೆಮೀರಿತು. ಅವರಲ್ಲೊಬ್ಬರು “ ಈಪರಿಯಸೊಬಗು !....” ಎಂದು ಗಟ್ಟಿಯಾಗಿ ಕೂಗಿದರು

ಭಾಗವತರ ಮುಂದಿದ್ದ ಮೂವತ್ತು ಮೂವತ್ತೈದು ಚೀಟಿಗಳಲ್ಲೂ ಅದೇ ಹಾಡಿನ ಹೆಸರನ್ನೇ ಬರೆದಿತ್ತು. ಎಲ್ಲರಿಗೂ ಬೇಕಾಗಿದ್ದದ್ದು ಅದೇ ಹಾಡು ! ಅದನ್ನೇ ಅವರು ಹಾಡುವರೆಂದು ಅವರು ಕಿವಿಯರಳಿಸುತ್ತಾ ಕುಳಿತಿದ್ದರು.

ಎಂಟು ವರ್ಷಗಳ ಹಿಂದೆ, ಗ್ರಾಮಫೋನ್ ಕಂಪೆನಿಯವರ ಬಲವಂತಕ್ಕೆ ಅವರು ಆ ಹಾಡನ್ನು ಅಂದದ್ದುಂಟು. ನಿಜ ಆ ಪ್ಲೇಟು ಮನೋಹರವಾಗಿ ಶ್ರುತಿ ತಾಳ ಲಯ ಬದ್ಧವಾಗಿ ಮುದ್ರಾಗಿತ್ತು. ನಿಜ. ಸಾವಿರಾರು ಪ್ಲೇಟು ಗಳನ್ನು ಕನ್ನಡಿಗರೂ, ಸಂಗೀತದ ಹುಟ್ಟುಪ್ರೇಮಿಗಳಾದ ತಮಿಳರೂ, ಕೊಂಡು ಕೊಂಡು ಮುಳ್ಳುಚುಚ್ಚಿ ತಿರುಗಿಸಿ ಮತ್ತೆಮತ್ತೆ ಕೇಳಿ ಆನಂದಿಸಿದುಂಟು. ನಿಜ. ಅಂದಿನಿಂದ ಇಂದಿನವರೆಗೂ ಭಾಗವತರು ಎಲ್ಲಿ ಕಚೇರಿ ನಡೆಯಿಸಲಿ, ದುದ್ದದಲ್ಲಾ ಗಲಿ, ದೋಳಸ್ ವಲಸ್ ವಂದನಲ್ಲೂರಿನಲ್ಲಾಗಲಿ, ತಿರುಕನ ಹಳ್ಳಿಯಲ್ಲಾಗಲಿ, ತಿರುಮಂಗೈ ಅಂಗೈಪುಡಿಯೂರೂರಲ್ಲಾಗಲಿ, “ ಈಪರಿಯ ಸೊಬಗಿ ”ಲ್ಲದೆ ಇಲ್ಲ, ಮನೆಗೆ ಯಾರಾದರೂ ಸ್ನೇಹಿತರೋ ಅಪರಿಚಿತರೋ ಬಂದರೆ, “ ಭಾಗವತರೇ ! ಈಪರಿಯಸೊಬಗನ್ನ ಕೊಂಚ ಕೇಳಬೇಕಲ್ಲಾ ! ” ಅನ್ನುವರು ; ಸಂತಾಪಸಭೆ, ಸಂತೋಷಸಭೆ, ವಿವಾಹ, ಋಷಿಪಂಚಮಿ, ಗಣೇಶಜಯಂತಿ, ಶಿವರಾತ್ರಿ,

ಪ್ರಾರ್ಥನಾಗೀತೆ, ಮಂಗಳ, ಎಲ್ಲಿ ಭಾಗವತರ ಬಾಯಿ ಕಂಡರೂ, "ಈಪರಿಯ ಸೊಬಗು!" ಎಂಬ ಕೂಗು! ಕಾಗದದ ಚೀಟಿಗಳಲ್ಲಿ, "ಈಪರಿಯಸೊಬಗು!" ಕೂಗಿ ಕೇಳುವದೆಲ್ಲಾ, "ಈಪರಿಯಸೊಬಗು!" ಹಳೇ ಹಾಳು ಪ್ಲೇಟಿನ ಕಿಸಿ ಬಾಯಿ ಕೀರ್ತನೆ.

ಅಂದು, ಅಲ್ಲಿ, ತಾನು ಅವನ್ನು ಅನ್ನುವುದೇ ಇಲ್ಲವೆಂದು ವಜ್ರಸಂಕಲ್ಪ ಮಾಡಿಕೊಂಡಿದ್ದರು, ಭಾಗವತರು. ಅದಕ್ಕಿಂತ ಉತ್ತಮವಾಗಿ, ಭಕ್ತಿಭಾವವನ್ನು ಕೆರಳಿಸಿ, ಪರಮಾತ್ಮನ ಲೀಲಾಮಾನುಷವಿಗ್ರಹವನ್ನು ಕೇಳಿಗರ ಕಣ್ಣ ಮುಂದೆ ಕಟ್ಟಬಲ್ಲ "ಕಂಗಳಿದ್ಯಾತಕೊ" ಎಂಬ ಕೀರ್ತನೆಯನ್ನೂ ಇನ್ನೂ ಅದೇ ತೆರನ ಹತ್ತಾರು ಕೀರ್ತನೆಗಳನ್ನೂ ಅವರು ಈಚೆಗೆ ಅಭ್ಯಾಸಮಾಡಿದ್ದರು. ಆದರೆ, ಆ ಕುರಿಗಳಿಗೆ ಯಾವುದೂ ಬೇಡ! ಹಳೆಯ ಸೊಪ್ಪನ್ನೇ ಕೇಳುತ್ತಿದ್ದವು; ಹೊಸ ಸುಧೆಗೆ ಅವು ಕಿವಿದೂಗವು; ಅದನ್ನು ಕುತೂಹಲದಿಂದ ಕೇಳುವ ಸಹನೆ ಕೂಡ ಇಲ್ಲ.

"ಈಪರಿಯಸೊಬಗು!" "ಈಪರಿಯಸೊಬಗು!" ಎಂಬ ಧ್ವನಿ ನಾಲ್ಕು ಗೋಡೆಗಳಿಂದಲೂ ಮಾರುಲಿಯಿತು!

ನರಹರಿಭಾಗವತರಿಗೆ ರೇಗಿತು ಅಂದಿನವರೆಗೂ ಅದುಮಿ ಹಿಡಿದಿದ್ದ ಅವರ ಆಕ್ರೋಶ ಕಟ್ಟೆಯನ್ನೊಡೆದು ತೂಬು ಏರಿಗಳನ್ನು ಕಿತ್ತೊಗೆದು ಪ್ರವಹಿಸಿತು. "ಇಲ್ಲ! ನೀವೆಲ್ಲ ಕುರಿಗಳು! ಬಿದ್ದ ಹಳ್ಳಕ್ಕೇ ಬೀಳುವಿರಿ! ನಾನೇನು ನಿಮ್ಮ ಗುಲಾಮನೇ? ಈದಿನ ಅದನ್ನು ಹಾಡುವುದಿಲ್ಲ! ಇನ್ನುಮುಂದೆ ಎಂದೆಂದಿಗೂ ಅದನ್ನು ಹಾಡುವುದಿಲ್ಲ. ಗಂಟಲೊಡೆಯುವಷ್ಟು, ಗೋಡೆ ಬೀಳುವಷ್ಟು ಕೂಗಿರಿ" ಎಂದು ಅವರು ಸಿಡಿಲಿದರು.

ನಿಶ್ಶಬ್ದ!...... ....ಎಲ್ಲರೂ ಸ್ತಬ್ಧರಾದರು. ಮರುಮಾತನಾಡಲು ಆ ಬೆರಗಿನಲ್ಲಿ ಒಬ್ಬರಿಗೂ ಧೈರ್ಯವಿರಲಿಲ್ಲ.

ನರಹರಿಭಾಗವತರು ಗಂಟಲು ಸರಿಪಡಿಸಿಕೊಂಡು "ಕಂಗಳಿದ್ಯಾತಕೊ!" ಎಂದು ಸರಸ ಗಂಭೀರವಾಗಿ, ಸುಮಧುರವಾಗಿ, ಭಾವೋದ್ರೇಕವಾಗಿ, ಕಿವಿಗಳಿದ್ದದ್ದು ಸಾರ್ಥಕ ಎನಿಸುವಷ್ಟು ಸವಿಗೂಡಿಸಿ, ಹಾಡಿದರು.

ಸಭಿಕರಲ್ಲೊಬ್ಬರೂ ತುಟಿಪಿಟಿಕೆನ್ನಲಿಲ್ಲ...........

ಈಗ, ನರಹರಿಭಾಗವತರು ಕೂತಲ್ಲಿ ನಿಂತಲ್ಲಿ ಬಾಯಿ ತೆರೆದಲ್ಲಿ ಮುಖ ತೋರಿದಲ್ಲಿ, ಜನ, "ಕಂಗಳಿದ್ಯಾತಕೊ, ಹಾಡಿ! ಕಂಗಳಿದ್ಯಾತಕೊ, ಹಾಡಿ!" ಎಂದು ಅವರನ್ನು ಕಾಡಲು ತೊಡಗಿದಾರೆ. ಆಗಲೇ ಅದನ್ನು ಸುಮಾರು ಇನ್ನೂರು ಸಲ ಅವರು ಅಂದಾಯಿತು.

ಪುಣ್ಯಾತ್ಮ! ಯಾವ ಹೊತ್ತು ಎಲ್ಲಿ ಚೀಟಿಗಳನ್ನು ಹರಿದು ಸಭಿಕರ ಮುಖಕ್ಕೆಸೆಯುತ್ತಾರೋ, ಶಿವನೇ ಬಲ್ಲ.

—ಸಾ. ಶ.



“ ಗಿಡವಾಗಿ ಬಗ್ಗದದು ಮರವಾಗಿ ಬಗ್ಗೀತೆ ಅಂತ ಮೇಷ್ಟ್ರು ಕೇಳಿದ್ರು, ನಾನು ಬಗ್ಗೀತು ಎಂದೆ............ಕೋಪ ಬಂತು ಅವರ್ಗೆ............ಅದ್ರಲ್ಲೇನಜ್ಜ ತಪ್ಪಿದೆ ? ’

ರೈಲಿನಲ್ಲಿ ಸಮತೆ

—o—

೧

ಕುಲದ ಹೆಮ್ಮೆ, ಪಡೆದ ಎಂ. ಎ.,
ಕೇಳುವರಾರಿಲ್ಲಿ ?
ಕೊರಳ ಪಟ್ಟಿ, ಉಟ್ಟ ಸೂಟು,
ನೋಡುವರಾರಿಲ್ಲಿ ?
ಜಗಳವಾಡಿ ದಡಬಡುರುಳಿ
ಬೈದು ನಿಂತು ಪೋಪೆವು
ಹೊಲದ ಕಂಬ್ಳಿ, ಸಿರಿಯ ಸರ್ಜಿ
ನೊಡನೆ ಒಂದೆ ಗುಂಪಲಿ

೨

ಚಿತ್ರ ಹಿಡಿದು ಕೆಲವರು ನುಗ್ಗ
ಬಹುದು ಚಣದಲಿ ;
ಮರೆಯಬಹುದು ಜರಿಯನೆಲ್ಲ
ಮಂದಿ ಎದುರಲಿ
ಆದರೇನು ? ಜಾಗಸಿಗದೆ
ನಿಲ್ಲರೇನು, ಸೊಕ್ಕು ಮುರಿದು ?
ಈಗ, ಬೇಗ,
ಬಹುದು, ಜಾಗ !
ಸುಮ್ಮನಾಸೆ ಪಡುತ ನಿಂತು,
ಗೋಳು ಮುಗಿವುದೆಂದಿಗೆ ?
ಎಲ್ಲ ಜನರು ಒಂದೆ ಭಾರ
ರೈಲು ಹರಿವ ಕಂಬಿಗೆ !

೩

ಹಣೆಯಮೇಲೆ ಹನಿವ ಬೆವರು
ಮೂಡದಿರುವುದೆ ?
ಹಿರಿಯ ನೂಕು ನುಗ್ಗಲಲ್ಲಿ
ಬಾಡದಿರುವುದೆ ?

ನುಗ್ಗಿ ಬಂದ ವೀರರೆಲ್ಲಿ?
ನೋಡು ಕಿಟಕಿ ಬಾಗಿಲಲ್ಲಿ!
ಎಲ್ಲ, ಕಡೆಗೆ—
ಬೆಂಚ ಕೆಳಗೆ!
ನಾವು ಹಿಡಿದ ಟಿಕೇಟೊಂದೆ
ಕಟ್ಟಕಡೆಯೊಳುಳಿವುದು!
ಊರೊಳಿಳಿದು ಹೋಗುವಾಗ
ಅದನು ಕೊಟ್ಟೇನಡೆವೆವು!

["Death the Leveller" ಎಂಬ ಪದ್ಯದ ಪುಟ್ಟಪ್ಪಾನುವಾದವನ್ನನುಸರಿಸಿ]

ಕುರುಕ್ಷೇತ್ರದಲ್ಲಿ ನಡೆದ ಮಹಾಭಾರತ ಯುದ್ಧದ ಕಾಲದಲ್ಲಿ ದಿನವೂ ರಾತ್ರಿ ಉಭಯದಳದವರಿಗೂ "ಉದಯನ್ ಚೇರನ್" ಎಂಬ ಟ್ರಾವಂಕೂರ್ ಮಹಾರಾಜರು ಅನ್ನ ಹಾಕಿ ತುಷ್ಟಿಪಡಿಸುತ್ತಿದ್ದರು ಎಂದು "ಟ್ರಾವಂಕೂರ್ ದಿವಾನರಾದ ಸರ್. ಸಿ. ಪಿ. ರಾಮಸ್ವಾಮಯ್ಯರವರು ಉದ್ಘೋಷಿಸಿದರು..................ಇದು "ಚಟ್‌ಪಟ್" ಭಾರತದಿಂದ ತೆಗೆದ ಒಂದು ಕಥೆ.

✤ ✤ ✤

"ನನ್ನ ಹೆಂಡತಿಗೆ ನಾನು ದಿನವೂ ಒಂದು ಕಾಗದ ಬರೆದು ಟಪಾಲಿಗೆ ಹಾಕುತ್ತಿದೇನೆ"

"ಅಯ್ಯೋ! ಹುಚ್ಚಾ! ಮೊನ್ನೆ ಮೊನ್ನೆ ತಾನೆ ಸಂಸಾರ ಹೂಡಿದಿಯಾ!"

"ಇಲ್ಲ, ಅದಕ್ಕಲ್ಲ! ಒಂದುದಿನ ಟಪಾಲಲ್ಲಿ ಕಾಗದ ಬರದೆ ಇದ್ದರೆ, ಅವಳೇ ಇಲ್ಲಿಗೆ ಬಂದುಬಿಡುತ್ತೇನೆ ಅಂತ ಹೆದರಿಸಿದಾಳೆ"

✤ ✤ ✤

"ಏನಯ್ಯ, ಗೋವಿಂದರಾಜಾ! ಗುರುತೇ ಸಿಕ್ಕುವುದಿಲ್ಲವಲ್ಲೋ?"


"ನನ್ನ ಹೆಸರು ಗೋವಿಂದರಾಜ, ಅಲ್ಲ ಸ್ವಾಮಿ!"

"ಅಯ್ಯೋ! ಮಹಾರಾಯ! ಹೆಸರನ್ನೂ ವೇ ಬದಲಾಯಿಸಿಕೊಂಡು ಬಿಟ್ಟಿದೀಯಾ?"

✤ ✤ ✤



" ಇದ್ದದ್ದನ್ನು ಇದ್ದ ಹಾಗೆ ಹೇಳುವವರು "


ဆုကိ.....ဗိုဗို-----

ಸಮ ಹಂಚುವಿಕೆ

ಬೆಳಗ್ಗೆ ಎದ್ದು ಹಾಗೆಯೇ ಅಡ್ಡಾಡಿ ಬರೋಣವೆಂದು ಹೊರಟೆ. ಸುಮಾರು ಒಂಭತ್ತು ಗಂಟೆಯ ಸಮಯ. ಬ್ರಾಹ್ಮಣರ ಕೇರಿಯನ್ನು ಹಾದೇ ಊರಾಚೆ ಹೋಗಬೇಕು. ಆ ಕೇರಿಯಲ್ಲಿ ಹೊರಟೆ. ಆರುಮನೆ ಬಾಗಿಲುಗಳು ಬಿಕೊ ಎನ್ನುತ್ತಿದ್ದುವು. ಒಂದೇ ಸಾಲಿನಲ್ಲಿ ಅದೂ ಕೂಡ. ಬ್ರಾಹ್ಮಣರ ಮನೆ ಬಾಗಿಲಲ್ಲಿ ಬೆಳಗಾಗುತ್ತಲೂ ಲಕ್ಷಣಾಕ್ಕೆ ರಂಗೋಲಿ ಇಡುವುದು ವಾಡಿಕೆ. ಮನೆಯಲ್ಲಿ ಅಪರಕಟ್ಲೆ ಇದ್ದರೆ, ಅಪರಕಟ್ಟಲೆ ಆಗುವ ಹಾಗಿದ್ದರೆ ಮಾತ್ರ ರಂಗೋಲಿ ಇಡುವುದಿಲ್ಲ. ಇದು ಮನೆಗೆ ಬರುವವರಿಗೆ, ಬಿಕ್ಷುಕರಿಗೆ ಸೂಚನೆ. ಬಾಗಿಲು ಬಿಕೊ ಎಂದಿದ್ದರೆ, ಬಿಕ್ಷುಕನಿಗೂ ಆ ಮನೆಯಲ್ಲಿ ಬಿಕ್ಷಕ್ಕೆ ಬಿಕೊ, ಬಂದವರಾರಾದರೂ ಇದನ್ನು ನೋಡಿದರೆ, ಇಂದು ಈ ಮನೆಗೆ ಹೋಗುವುದಿಲ್ಲ ಎಂದು ತೀರ್ಮಾನಿಸಿ ಹಾಗೆಯೇ ಮುಂದುವರಿಯುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ಒಳಗೆ ಇದ್ದಾರೆ— ಇಲ್ಲ ಎಂದು ಬೋರ್ಡು ಹಾಕಿದಂತೆ ಈ ರಂಗೋಲಿ ನಮ್ಮ ಮನೆಗಳಿಗೆ ಸಹಾಯಕ. ಇಂತಹದರಲ್ಲಿ ಒಮ್ಮೆಲೇ ಆರು ಮನೆ ಬಾಗಿಲು ಬಿಕೊ ಎಂದರೆ, ಈ ಆರು ಮನೆಯವರೂ ದಾಯಾದಿಗಳೇ, ಆರು ಮನೆಗಳ ತಲೆ ಮಾರಿದವನಾರಾದರೂ ಹರಹರ ಎಂದನೇ, ಅಥವಾ ಇಲ್ಲೇನಾದರೂ ಸಾಂಕ್ರಾಮಿಕ ಜಾಡ್ಯ ಬಂದಿತ್ತೇ, ಇಲ್ಲವೇ, ಹಸ್ತಗುಣಪ್ರಸಿದ್ಧನಾದ ವೈದ್ಯನ ಹಾವಳಿಯೋ, ಏನಿರಬಹುದು ಇದರ ಮರ್ಮ, ಎಂದು ನನಗೆ ಯೋಚನೆಗೆ ಪ್ರಾರಂಭವಾಯಿತು. ಗಾಳಿ ಸಂಚಾರಮಾಡುವುದು ಬಿಟ್ಟು ಇದನ್ನು ತನಿಖೆಮಾಡಿಯೇ ಬಿಡಬೇಕೆಂದು ಆರನೆಯ ಮನೆಯಲ್ಲಿ ನನಗೆ ಪರಿಚಯನಾದ ಶಾಮಣ್ಣನನ್ನು ಬೇಟಿಯಾಗೋಣವೆಂದು ಆ ಮನೆಗೆ ಹೋದೆ. ಶಾಮಣ್ಣನೂ ಇದ್ದ. ಆ ಮಾತು ಈ ಮಾತು ಆಡಿ ಕಡೆಗೆ ಹೊರಕ್ಕೆ ಕರತಂದು ಕೇಳಿದೆ. "ಇದೇನಯ್ಯಾ ಆರುಮನೆಗಳೂ ಸಾಲಿಗೆ ಸಾಲೇ, ಬಿಕೋ ಎಂದಿವೆಯಲ್ಲಾ" ಎಂದು. ಅವನಂದ "ಹಾಗಲ್ಲಾ ರಾಯರೇ, ಈ ಊರಿನಲ್ಲಿ ಈಗ ರಂಗೋಲಿ ಸಿಗುವುದು ಬಹಳ ಕಷ್ಟವಾಗಿದೆ. ಇದ್ದ ರಂಗೋಲಿಯನ್ನೆಲ್ಲಾ ಗುಂಡು ಮದ್ದಿಗೆ ಮಾರ್ಪಡಿಸಿ ಯುದ್ಧಕ್ಕೆ ಉಪಯೋಗಿಸುತ್ತಾರಂತೆ. ಆರು ಕಾಸಿಗೆ ಒಂದು ಸೇರು ರಂಗೋಲಿ ಇದ್ದದ್ದು ಈಗ ಆರು ಆಣೆ ಆಗಿದೆ. ಶ್ಯಾಮ ಸಂತೆಯಲ್ಲಿ ಒಂದು ರೂಪಾಯಿಯೂ ಆಗಿದೆಯಂತೆ. ಅಭಾವದಿಂದಲೇ ಹೀಗಾಗಿದೆ. 'ಲಕ್ಷಣವೇನು ಅವಲಕ್ಷಣ ಭಿಕ್ಷುಕರ ಹಾವಳಿ ತಪ್ಪಿದ್ದೇ ಒಂದು' ಎಂದು ನಾವು ಸುಮ್ಮನಾಗಿದ್ದೇವೆ"

ರಂಗೋಲಿ ಅಭಾವವು ಪ್ರಧಾನ ಸಚಿವರ ಮನೆಗೂ ತಾಕಿತು. ಮೂರನೆಯ ದಿನ ಬೆಳಗ್ಗೆ ಸಚಿವರ ಮನೆಬಾಗಿಲೂ ಬಿಕೋ. ಊರಲ್ಲೆಲ್ಲಾ ಹುಡುಕಿ

ಸಿದರು, ಮೊದಲು ಜವಾನ, ನಂತರ ಆಪ್ತ ಕಾರ್ಯದರ್ಶಿ, ಆಮೇಲೆ ಪ್ರಧಾನ ಕಾರ್ಯದರ್ಶಿ. ಕಡೆಗೆ ಸಚಿವರೇ ಪೇಟೆಗೆ ಹೋದರು. ಎಲ್ಲೂ ರಂಗೋಲಿಯೇ ಇಲ್ಲ. ಸಚಿವರ ಯಜಮಾನಿತಿಯು ಹಳೇ ಸಂಪ್ರದಾಯದವಳು ರಂಗೋಲಿ ಬಾಗಿಲಿಗಿಡುವ ತನಕ ತಾನು ಊಟಮಾಡುವುದಿಲ್ಲವೆಂದಳು. ಬಂತಲ್ಲಾ ಕಷ್ಟ. ಸರಕಾರಕ್ಕೆ ಸರಕಾರವೇ ತಟಸ್ಥವಾಗುವ ಹೊತ್ತು ಬಂತು. ಇದಕ್ಕೇನಾದರೂ ಮಾಡಲೇಬೇಕು ಎಂದು ಸಚಿವಶ್ರೇಷ್ಠರು ಆಜ್ಞೆ ಇತ್ತರು.

ಊರ ಪುರೋಹಿತರು ಬಂದರು ಯಜಮಾನಿಯವರನ್ನು ನೋಡಿದರು. "ಅಮ್ಮಾ" ಎಂದರು. ಕೆಮ್ಮಣ್ಣಿನಲ್ಲಿ ಬಾಗಿಲ ಬಳಿ ಶ್ರೀ ಎಂದು ಬಳಿದರೆ, ಈ ರಂಗೋಲಿ ದೋಷವು ಹೋಗುತ್ತದೆ ಎಂದರು. ಇದಕ್ಕೆ ಬ್ರಹ್ಮಸೂತ್ರದ ಟಿಪ್ಪಣಿಯನ್ನು ಉದ್ಧರಿಸಿದರು, ಮನುವಿನ ಸ್ಮೃತಿಯನ್ನು ತಪ್ಪಿಸಿ ಓದಿದರು. ಅಮ್ಮಾವರು ಒಪ್ಪಲಿಲ್ಲ. "ಬಾಗಿಲಿಗೆ ರಂಗೋಲಿ ಇಡದಿದ್ದರೆ, ತಲತಲಾಂತರದಿಂದಲೂ ಇದ್ದ ಲಕ್ಷಣವನ್ನು ನಡೆಸದಿದ್ದರೆ, ಮನೆಗೆ ಏಳಿಗೆಯುಂಟೇ, ದೇಶಕ್ಕೆ ಸುಖವುಂಟೆ, ಕೆಮ್ಮಣ್ಣಿನಲ್ಲಿ ಕೊರೆದರೆ ಗೆಜ್ಜಲು ಬರದೆ ಇರಬಹುದು ಆದರೆ ಲಕ್ಷಣವುಂಟೆ" ಎಂದರು. ನಿರಶನವ್ರತವನ್ನು ರಂಗೋಲಿ ಸಿಗುವ ತನಕ ಸಾಧಿಸುತ್ತೇನೆಂದು ಹಠ ತೊಟ್ಟರು.

ಇದನ್ನು ಕಂಡಮೇಲೆ ಉಗ್ರಕಾರ್ಯವನ್ನು ನಡೆಸಲೇಬೇಕೆಂದು ಸರ್ಕಾರವು ನಿರ್ಧರಿಸಿತು. ಎಲ್ಲಿರಲಿ, ಏನಾಗಲೀ ಶ್ವೇತ ಸಂತೆಗೆ ರಂಗೋಲಿಯನ್ನು ತಂದೇ ತರಬೇಕೆಂದು, ನಗರರಕ್ಷಕರಿಗೆ ಆಣತಿಯಿತ್ತರು. ಸೇರಿಗೆ ಆರು ಕಾಸಿಗಿಂತ ಹೆಚ್ಚಾಗಿ ಯಾರಾದರೂ ರಂಗೋಲಿ ಮಾರಿದರೆ ಅವರನ್ನು ಗಲ್ಲಿಗೇರಿಸಬೇಕೆಂದು ಶಾಸನವನ್ನು ಮಾಡಿದರು. ಬಚ್ಚಿಟ್ಟುಕೊಂಡು ಇಲ್ಲ ಎಂದು ಹೇಳಿದರೆ ಗಡೀಪಾರು ಮಾಡಬೇಕೆಂದೂ ಶಾಸನವು ಹೊರಟಿತು, ಅರ್ಧಸೇರಿಗಿಂತ ಹೆಚ್ಚು ರಂಗೋಲಿ ದಾಸ್ತಾನು ಇಟ್ಟವರ ಆಸ್ತಿಯನ್ನು ಮುಟ್ಟುಗೋಲು ಹಾಕಬೇಕೆಂದೂ, ಆಜ್ಞೆಯಾಯಿತು.

ಆಗ ತೊಗೊಳ್ಳಿ ನಗರ ರಕ್ಷಕರ ದರ್ಬಾರು.

ದೋಸೆ ಮಾಡಲಿಕ್ಕೆಂದು ಅಕ್ಕಿಹಿಟ್ಟನ್ನಿಟ್ಟುಕೊಂಡಿದ್ದ ಶಾಲಾಣೆ ದೋಸೆ ಹೋಟಲಿನವನನ್ನು ಒಬ್ಬ ರಕ್ಷಕನು ಮುತ್ತಿದನು.

"ಏನಯ್ಯಾ ರಂಗೋಲಿಯನ್ನು ಪಾತ್ರೆಯಲ್ಲಿಟ್ಟಿದ್ದಿ, ಒಂದು ಸೇರಿನಷ್ಟಿದೆ ದೇಶಾಜ್ಞೆ ಗೊತ್ತಿಲ್ಲವೋ, ನಿನ್ನ ಆಸ್ತಿ ಮುಟ್ಟುಗೋಲು" ಎಂದ

"ಇಲ್ಲಾ ಪ್ರಭೋ! ಇದು ಅಕ್ಕಿಹಿಟ್ಟು" ಎಂದು ಮಾಣಿ ಎಂದ.

"ಓಹೋ ಸುಳ್ಳುಬೇರೆ ಹೇಳುತ್ತೀಯಾ, ಈ ಅಪರಾಧಕ್ಕೆ ಗಡೀಪಾರು" ಎಂದ.

“ ಇಲ್ಲಾ ನನ್ನೊಡೆಯ. ದಿಟವಾದ ಮಾತು. ಬೇಕಾದರೆ ಒಂದು ಚಿಟಿಗೆ ಬಾಯಿಗೆ ಹಾಕಿ ನೋಡಿಕೊಳ್ಳಿ ” ಎಂದು ಹೇಳಿದ ಮಾಣಿ.

“ ನನ್ನ ಬಾಯಿಗೆ ರಂಗೋಲಿ ಹಾಕಲು ಬರುತ್ತೀಯಾ ಭಡವಾ ” ಎಂದು ರಕ್ಷಕ ಕೈಕೈಹಿಸುಕುತ್ತಾ ಹೇಳಿದಾ.

ಆಗ ಮಾಣಿಗೆ ಜ್ಞಾನೋದಯ. ಬೇಗ ಒಳಕ್ಕೆ ಹೋಗಿ ಐದು ರೂಪಾಯಿ ತಂದ. ರಕ್ಷಕನ ಹಿಂಗೈ ಕುಲುಕಿದ. ತಮ್ಮಂತಹವರು ಆಗಾಗ್ಗೆ ಬರುತ್ತಿರಬೇಕು ಎಂದು ಪ್ರಾರ್ಥಿಸಿದ. ಬೀಸೋ ದೊಣ್ಣೆಯನ್ನು ತಪ್ಪಿಸಿಕೊಂಡ.

ಈ ನಗರ ರಕ್ಷಕ ಸ್ವಾರ್ಥಪರನಲ್ಲ. ತನಗೆ ಲಭಿಸಿದ ಪುಣ್ಯ ತನ್ನ ಸೋದರರಿಗೂ ದೊರಕಲಿ ಎನ್ನುವ ಶ್ರೇಷ್ಠಜಾತಿಯವ. ಠಾಣೆಗೆ ಹೋಗಿ ಸೋದರಧಿಕಾರಿಗಳಿಗೆಲ್ಲಾ ಹೇಳಿದ. ಒಬ್ಬೊಬ್ಬರೂ ಒಂದೊಂದು ದಿನ ದೋಸೆಯ ಹೊತ್ತಿಗೆ ಹೋಗಬೇಕೆಂದೂ, ಅಕ್ಷರಮಾಲೆಯ ರೀತಿಯಲ್ಲಿ ಅನ್ನದಾನಯ್ಯ ಆನಂದಯ್ಯ, ಹೀಗೆ ಹೋಗಬೇಕೆಂದೂ ಸೂಚಿಸಿದ.

ಹೋಟಲ ಮಾಣಿ ಮಾರನೆಯ ದಿನ ಈ ರಕ್ಷಕರ ಸವಾರಿಯನ್ನು ನೋಡಲಾರದೆ ತಾಳಲಾರದೆ, ಹೋಟಲು ಮುಚ್ಚಿ, ಊರಿಗೆ ಹೋದ.

ಇನ್ನೊಂದು ಕಡೆ; ಮತ್ತೊಂದು ಕಡೆ ಮಗುದೊಂದು ಕಡೆ ಇದೇ ರೀತಿಯಾಗಿ, ಮರಳುರಾಶಿ ಹಾಕಿದ್ದವನೂ, ಒಣಗಿದ ಗಾರೆ ಕಾಲುವೆಯವನೂ ಕಡೆಗೆ ಬಿಳಿ ಸಿಮೆಂಟಿನ ವ್ಯಾಪಾರಿಯೂ ಟೋಪಿ ಬಿದ್ದರು, ಶಾಸನದ ದವಡೆಗೆ ಸಿಕ್ಕಿದರು.

ಆದರೂ ರಂಗೋಲಿ ಹೊರಕ್ಕೆ ಬರಲಿಲ್ಲ.

ಈಗ ಸುವ್ಯವಸ್ಥೆಯಾಗಿದೆಯಂತೆ, ಬೇರೆ ಊರಿನಿಂದ ಗಾಡಿಗಾಡಿಗಳಲ್ಲಿ ರಂಗೋಲಿ ತರಿಸುವ ಏರ್ಪಾಡಾಗಿದೆಯಂತೆ. ಊರಿನವರಿಗೆಲ್ಲಾ ಮನೆಗೆ ಇಷ್ಟು ಎಂದು ಹಂಚುವಿಕೆಯಾಗುತ್ತದಂತೆ; ಈಗಾಗಲೇ ಈ ಹಂಚಿಕೆಯ ರಂಗೋಲಿ ಸಾಕಾಗುವುದಿಲ್ಲವೆಂಬ ಭೀತಿಯಿಂದ ಹಲವಾರು ಬ್ರಾಹ್ಮಣರು, ಹಿಂದುಗಳೂ, ಮುಸಲ್ಮಾನರ ಸ್ನೇಹಮಾಡುತ್ತಿರುವರಂತೆ ಏಕೆಂದರೆ ಸಮಹಂಚುವಿಕೆಯಲ್ಲಿ ಮುಸಲ್ಮಾನರು ಹಿಂದುಗಳು ಎಂಬ ಭೇದವು ತಾರು ಭಾವನೆಯಿಲ್ಲವಂತೆ ರಂಗೋಲಿ ಕಟ್ಟಿಕೊಂಡು ರಹಿಂಖಾನನೇನು ಮಾಡಬೇಕು. ಆದ್ದರಿಂದಲೇ ಈಗ ಹಿಂದೂ ಮುಸಲ್ಮಾನ ಸೌಹಾರ್ದವೇರ್ಪಡುತ್ತಿದೆಯಂತೆ. ಇದೆಲ್ಲಾ ಇನ್ನೆರಡು ದಿನಗಳಲ್ಲಿ ಆಗಬಹುದಂತೆ.

ಅನಂತರ ಈ ಸುದ್ದಿ ತಿಳಿಸುತ್ತೇನೆ.

[ಖಂಡಿತ. ಬೇಡವಯ್ಯಾ— ಸಂ.]

ಅನರ್ಥ ಕೋಶ

ಚುಟ್ಟ : ತರಗೆಲೆಯ ಸುರುಳಿ

ಚುನಾವಣೆ : ನಾಲ್ಕಾರು ಚಿತ್ರಗಳ ಪೈಕಿ ಯಾವುದು ಹೆಚ್ಚು ವಿಚಿತ್ರವೆಂದು ಮಹಾಜನಗಳು ನಿರ್ಧರಿಸುವ ಸನ್ನಿವೇಶ

ಚಂದ್ರಹಾಸ : ಸೂರ್ಯಹಾಸದ ಪ್ರತಿಬಿಂಬ

ಛೂ : ನಾಯಿಜನ್ಮ ತಾಳಿದವರಿಗೆ ಇದರ ಅರ್ಥ ಬಹು ಬೇಗ ತಿಳಿಯುತ್ತೆ

ಜಗದ್ಗುರು : ಗಜತುರಗ ಪತಾಕೆಗಳ ಸಹಿತ ಬೀದಿಗೆ ಅಡ್ಡಲಾಗಿ ಮೆರವಣಿಗೆ ಬರುವ ಮಾನುಷಾವತಾರ.

ಜಗಲಿ : ಜಗಳಗಳ ಉತ್ಪತ್ತಿಸ್ಥಾನ

ಜಗಳ : ಅತ್ತೆಸೊಸೆಯರ ಸಲ್ಲಾಪ

ಜಟಕಾ : ಬಡಕುದುರೆಗಳ ಹಿಂದೆ ಓಡಾಡುವ ಒಂದು ರೀತಿಯ ಅಗ್ಗದ ಗೋರಿ

ಜಠರ : ಹೋಮಕುಂಡ; ಅನ್ನಬ್ರಹ್ಮನ ದರ್ಭಗುಡಿ ; ಭಕ್ಷ್ಯ ಯಜ್ಞಮಾಡುವ ಸ್ಥಳ

ಜಡೆ : ಸ್ತ್ರೀಗಳನ್ನು ಅಬಲೆಯರಾಗಿ ಮಾಡುವ ಅಲಂಕಾರ

ಜನಮೇಜಯ : ಮಹಾಭಾರತ ಕಥಾಶ್ರವಣವನ್ನು ತೂಕಡಿಸದೆ ಪೂರೈಸಿದ "ಹೂ ಬತ್ತಿಯ ಹೀರೋ"

ಜರಿ : ಇಂಗ್ಲೀಷಿನಲ್ಲಿ 'ಗಿಲ್‌ಟ್'; ಕನ್ನಡದಲ್ಲಿ 'ಗಿಲೀಟ್'

ಜಿಪುಣ : ಕಪಿಮುಷ್ಟಿಯನ್ನು ಮೀರಿಸುವ ನರಮುಷ್ಟಿ

ಜೂ : ಸಿಕ್ಕಿಬಿದ್ದ ಪ್ರಾಣಿಗಳನ್ನು ತಪ್ಪಿಸಿಕೊಂಡ ಪ್ರಾಣಿಗಳು ಹೋಗಿ ನೋಡುವ ಸ್ಥಳ

ಜೋಗುಳ : ನಾವು ಕೇಳುವ ಮೊದಲನೆಯ ಸಂಗೀತ ; ಆದ್ದರಿಂದಲೇ ಅನೇಕರಿಗೆ ಅಷ್ಟು ಜುಗುಪ್ಸೆ

ಜಂಬ : ಕತ್ತೆಯನ್ನು ಕಂಡಾಗ ಹೇಸರು ಕತ್ತೆಗಾಗುವ ಭಾವವಿಶೇಷ

———o———

ಕಪಟ ವೈರಾಗ್ಯ

ಉದರವೈರಾಗ್ಯವಿದು, ನಮ್ಮ
ಬ್ರದರ ಮಿಸರಿಯಲ್ಲಿ ಲೇಶ ಸಿಂಪತಿ ಇಲ್ಲ | ಉದರ

೧

ವೇದಿಕೆ ಮೇಲೆ ನಿಂತು ಬಡಬಡ ಗುಡುಗುತ
ಹೃದಯ ವಿಶಾಲವೆಂದು ಹಿಗ್ಗುತಲಿ
ಮದ ಮತ್ಸರ ಕೊಬ್ಬು ಒಳಗೆ ತುಂಬಿಟ್ಟುಕೊಂಡು
ನದಿಯ ಮೊಸಳೆಯಂತೆ ಕಂಬನಿಸುರಿಸುವು | ದುದರ

೨

ಕಡಲ ದಾಟಿಬಂದ ಕರಿದೊರೆಯಂದದಲಿ
ಬಿಡದೆ ಕಾಲರ್‌ಪೈಜಾಮು ಧರಿಸಿ
ಮಿಂಚಲೆನುತ ಹೊಸ ಬ್ಲೇಡುವಪನಮಾಡಿ
ವಂಚನೆಯಲಿ ನೇವಿ ಕಟ್ಟನೆ ಉರಿಸುವು | ದುದರ

೩

ಕರದಲಿ ಲೇಖಣಿ ಬಾಯಲಿ ಬಿರುನುಡಿ
ಅರಿವಿನ ಮುಸುಕನು ಮೂತಿಗೆ ಹಾಕಿ
ಪರಮನುಜರ ಜರಿಜರಿಯುತಲನುದಿನ
ಪರಮಸೇವಾನಿಷ್ಠತಾನೆಂದೆನಿಸುವು | ದುದರ

೪

ಕೂಟ ಟೀಪಾರ್ಟಿಯಲಿ ಬಹಳ ಸಿಂಪತಿನೀಡಿ
ದಿಟ ಈತ ದೀನೋದ್ಧಾರನೆನಿಸಿ
ನಾಟಕ ಯೋಗಿಯಂತೆ ಬಯಲಡಂಭವಬೀರಿ
ಬೂಟಕ ತನದಾ ಆಟವಿದಲ್ಲದೆ | ಉದರ

೫

೫

ನಾನು ಎಂಬುದ ಬಿಟ್ಟು, ಕೂಲಿಗಳೊಡಗೂಡಿ
ಏನಾದರೂಸರಿ ನೇಗಿಲೆ ಎಂದು
ಧ್ಯಾನಿಸಿ ದಿನದಿನ ದರಿದ್ರನಾರಾಯಣ
ಸೇವೆಯಮಾಡದ ಸಾಹಿತ್ಯವೆಲ್ಲವೂ । ಉದರ

—————

ತದ್ಭವಗಳು :—ಭ್ರಾತರ — ಬ್ರದರ
ಮಿಗಿಲಾಚಕ್ರಮ — ಮಿಸರಿ
ಸಹಾನುಭೂತಿ — ಸಿಂಪತಿ

—ಪಾಪಾ.

“ಅಪ್ಪಾ! ನಾನೂ ನೀನೂ ಮ್ಯಾಟಿಂಗಿಗೆ ಹೋಗಿದ್ದೆವು ಅಂತ ಪೇಪರಲ್ಲಿ ಬಂದಿದೆ”

“ಎಲ್ಲೋ! ಅದನ್ನ ಯಾರೋ ಪೇಪರಿಗೆ ಕಳುಹಿಸಿದರು?”

“ನೋಡಿಲ್ಲಿ ‘ಆದಿನದ ಮ್ಯಾಟಿಂಗಿಗೆ ಸಾವಿರಾರು ಜನರು ಬಂದಿದ್ದರು ಅಂತ ಹಾಕಿದೆ. ನಾವುಸೇರಿ ತಾನೆ ಸಾವಿರಾರು?”

◆ ◆ ◆

ಗುಮಾಸ್ತೆಯರ ಚಳುವಳಿ

ಲಾಹೋರಿನಲ್ಲಿ ೪೦೦ ಗುಮಾಸ್ತೆಯರು ರಿಜಿಸ್ಟರಿನಲ್ಲಿ ರುಜುಹಾಕಿ ಕೆಲಸ ಮಾಡದೆ ಕಾಲುನೀಡಿ ಕುಳಿತಿದ್ದರು. ಸಾಮೂಹಿಕ ಸಂಪು

ರುಜುಹಾಕಿದರೆ ಕೆಲಸಮಾಡಿದ ಹಾಗೆ ಆಗಲಿಲ್ಲವೆ? ಎಂದು ನಮ್ಮವರು ಕೇಳುತ್ತಿದಾರೆ.

ಮದ್ರಾಸಿನಲ್ಲಿ ಗೊರವಂಜೀ

[ನಮ್ಮ ಸ್ವಂತ ಪಾದ್ರೀಕಾರರಿಂದ]

ನನಗೆ ಈ ತಿಂಗಳು 12ನೇ ತಾರೀಖಿನವರಿವಿಗೂ ಕೊರವಂಜಿಯೇ ಸಿಗಲಿಲ್ಲ —ಮದ್ರಾಸಿನಲ್ಲಿ. 13ನೇ ತಾರೀಖು, ಏನೇ ಆಗಲಿ ಇವತ್ತು ಹುಡುಕಿ ತರಲೇ ಬೇಕೆಂದು ಹೊರಟೆ. ಅವಳೂ ತರದಿದ್ದರೆ ರಾತ್ರಿ ಊಟವಿಲ್ಲವೆಂದು ಗದರಿಸಿದ್ದಳು. ಸರಿ ತಲೆಮೇಲೆ ಒದ್ದೆ ಬಟ್ಟೆ ಹಾಕಿಕೊಂಡು ಹೊರಟೆ- ಉರಿಬಿಸಿಲು. ಮಟಮಟ ಮಧ್ಯಾಹ್ನ. ನನ್ನ ಗಡಿಯಾರ ೩ ಘಂಟೆ ತೋರಿಸುತ್ತಿತ್ತು. ಊರಿನಲ್ಲೆಲ್ಲೆ ಲ್ಲಿಯೂ ಗಡಿಯಾರಗಳು ೩೩೩೩೩೩೩೩೩೩ 10000 ಘಂಟೆಗಳು ಹೊಡೆಯು ತ್ತಿದ್ದವು. ಯಾವ ಅಂಗಡಿಯಲ್ಲಿ ಕೊರವಂಜಿಯನ್ನು ಕೇಳಿದರೂ ನನ್ನ ಮುಖ ವನ್ನೇ ನೋಡುವರು. ಅಂಗಡಿಯನ್ನು ಹ್ಯಾಪ್‌ಮೋರೆ ಹಾಕಿ ಬಿಟ್ಟೊಡನೆಯೇ ಪಿಸುಪಿಸು ಮಾತನಾಡುವರು ಊರಿನ ಅಂಗಡಿಗಳನ್ನೆಲ್ಲವನ್ನೂ ಮುಗಿಸಾಯಿತು. ಬಿಟ್ಟೆ ವಾಚನಾಲಯಗಳನ್ನೆಲ್ಲಾ ಶೋಧಿಸಿದುದಾಯಿತು. ಬಸ್ಸು, ಟ್ರಾಂ, ಬಸ್ಸ್ಟ್ಯಾಂಡ್, ಟ್ರಾಮ್ಷೆಡ್, ಫ್ಲಾಟ್‌ಫಾರಂ, ಎಲ್ಲಾ ಹುಡುಕಿದ್ದಾಯಿತು ದಾರಿ ಯಲ್ಲಿ, ಫುಟ್‌ಪಾತಿನಮೇಲೆ, "ಕಾಂಪೌಂಡ್ ಗೋಡೆ"ಗಳಮೇಲೆ, "ಗೇಟ್ ಬಾಗಿಲು" ಗಳ್ಲಿ, ದೊಡ್ಡ ಬಂಗಲೆಗಳ ಮೆಟ್ಟಲುಗಳಮೇಲೆ, ಪಾರ್ಕಿನಲ್ಲಿ, ಮರ ಗಳ ಕೆಳಗೆ, ನಿಂತು, ಕೂತು, ತೂಗಡಿಸುತ್ತ, ಮೆಲುಕುಹಾಕುತ್ತ, ಎಲೆಡಿಕೆ ಅಗಿಯುತ್ತ ಓದುತ್ತಿರುವವರ ಮುಖಗಳನ್ನೆಲ್ಲಾ ನೋಡಿದ್ದಾಯಿತು. ಒಬ್ಬರ ಮುಖದಲ್ಲಿಯಾದರೂ ನಗುವಿನ ಚಿಹ್ನೆಯೇ ಇಲ್ಲ— ಅಂದರೆ ಅವರೊಬ್ಬರಿಗೂ ಕೊರವಂಜಿ ಕೊರವಂಜಿಯ ಗಂಧವೇ ತಿಳಿದಿರಲಾರದು. ನೆತ್ತಿಯಮೇಲೆ ನನ ಗಾಗಿ ಉರಿಯುತ್ತಿದ್ದ ಸೂರ್ಯ, ಕಾಲಡಿಯಲ್ಲಿ ಕುದ್ದು ಹರಿಯುತ್ತಿರುವ ಟಾರು, ಬಲಗಡೆಯಲ್ಲಿ ಮೂರು ಹೊಟ್ಟೆ, ನಾಲ್ಕು ಕತ್ತಿನ ಐಯ್ಯರ್, ಎಡಗಡೆ ಚೆಟ್ಟಿ ಯಾರ್, ಬೆನ್ನಿನಮೇಲೆ ಮಲೆಯಾಳಿ ನಾಯರ್, ಮುಂದುಗಡೆ ತನ್ನ ವಿಶಾಲ ವಾದ ಶರೀರದಿಂದ ನನ್ನ ದಾರಿಯನ್ನೇ ಬಂದುಮಾಡಿರುವ ವೇದಿಯಾರ್—ಇವರು ಗಳ ಮಧ್ಯೆ ನಾನು, ನನ್ನಪಾಡು! ಹಾಗೆಯೇ ಹೊರಟೆ. ಎಲೆಡಿಕೆಯ ಉಗುಳು, ಬಾಳೆಹಣ್ಣಿನ ಸಿಪ್ಪೆ, ಎಳನೀರಿನ ಚಿಪ್ಪು, ಊಟಮಾಡಿದ ಬಾಳೆಯೆಲೆ, ಕೂಸು ಭಿಕ್ಷುಕರು— ಇವುಗಳ ಮೇಲೆಯೇ ನಡೆದು, ಮುಗ್ಗರಿಸಿ, ತಡವರಿಸಿ ಹೊರಟೆ— ಗಾಂಧೀಜೀಯವರು ಸತ್ಯವನ್ನು ಹುಡುಕಿಕೊಂಡು ಹೊರಟ ಹಾಗೆ. ಕೊರವಂಜಿ ಯಂತೂ ಇಲ್ಲ. ರಾತ್ರಿ ಮನೆ ಸೇರುವ ಆಸೆಯೂ ಇಲ್ಲ. ಏನುಮಾಡಲಿ? ಬೆಂಗ ಳೂರಿಗೆ ಬರೆಯಲೇ? ಕೇವಲ ಎರಡಾಣೆಯ ಕೊರವಂಜಿಗೆ ಮೇಲೆ ಮೂರಾಣೆ ಕೊಡಲೇ? ಅವಳಿಗೆ ಏನುಹೇಳಲಿ? ಮದ್ರಾಸಿನಲ್ಲಿ ಕೊರವಂಜಿ ಇಲ್ಲ ಎಂದರೆ

ನೆಂಬಾಳೇ ? ನನಗೆ ಯಾವುದೂ ದಿಕ್ಕುತೋಚಲಿಲ್ಲ. ಒಂದು ಉಡುಪಿ ಹೋಟಲಿಗೆ ನುಗ್ಗಿದೆ ಸ್ವಲ್ಪಹೊತ್ತು ಹುಡುಕಿ ಮಿಕ್ಕೆಲ್ಲರೂ ಕಣ್ಣಿಗೆ ಬೀಳುವ ಒಂದು ಮೂಲೆಯಲ್ಲಿ ಬಿಡಾರಮಾಡಿದೆ ನನ್ನೆದುರಿನಲ್ಲಿ, ಒಂದು ಪ್ರತ್ಯೇಕ ಟೇಬಲ್‌ನಲ್ಲಿ ಇಬ್ಬರು ಏನನ್ನೋ ನೋಡಿ ನೋಡಿ ನಗುತ್ತಿದ್ದರು ನೋಡಿದರೆ ಯಾವುದೋ ಪೇಪರ್ ಇರಬಹುದು. ಇಡೀ ಮದ್ರಾಸಿನಲ್ಲೇ ಆವತ್ತಿನ ದಿನದಲ್ಲಿ ಅವರಿಬ್ಬರೇ ನಗುತ್ತಿದ್ದದ್ದು. ನನಗೆ ಕುತೂಹಲವಾಯಿತು. ಹತ್ತಿರವೇ ಇದ್ದ ಮಾಣಿಯನ್ನು ಕರೆದೆ.

" ಡೇ ಪಯ್ಯ — ಅರೆಂಡುಪೇರು ಎನ್ನಡಾ ಪೇಪರ್ ಪಡಿಕಿರಾ " ಅಂತ ಕೇಳಿದೆ. ನನಗೆ ತಮಿಳ್ ಹೊಸತಾಗಿ ಕಲಿತಿದ್ದು.

ಮಾಣಿ ನಾನು ಕೈತೋರಿಸಿದ ಕಡೆ ನೋಡಿ, ಹುಬ್ಬು ಗಂಟು ಹಾಕಿ, ಸೊಟ್ಟ ಮೂತಿ ಮಾಡಿ, " ಅವರಾ ? ಮೈಸೂರುಕಾರರ್, ಎದುವೋ ಗೊರವಂಜಿಯೋ ಒರವರ್ರ್ಪಡಿಚಿಂಡಿರ್ರ್ಕ " ಅಂದ.

ಗೊರವಂಜೀ ?

" ಎನ್ನಾ ತಮಿಳಾ ? " ಅಂದೆ.

" ಅಲ್ಲೆ—ಎದುವೋ ಗನ್ನಡವೋ " ಅಂದ.

ಸರಿ. ಮನೆಯೂಟ ಸಿಕ್ಕಿತು ಅಂತ ಆ ಮಹನೀಯರ ಬಳಿ ಓಡಿದೆ. ಅವರು ಮುಗಿಸುವವರಿವಿಗೂ ಅಲ್ಲಿಯೇ ಇದ್ದು ಕೇವಲ ಎರಡಾಣೆ ಕೊಟ್ಟು— ಕಡೆಗೂ ಕೊರವಂಜಿಯನ್ನು ಜೇಬಿನಲ್ಲಿಟ್ಟು ಮನೆಗೆ ಹೊರಟೆ.

ಆಗತಾನೇ ಸಮುದ್ರದ ತಂಗಾಳಿಯೂ ಬೀಸುತ್ತಿತ್ತು.

—ಕೇ. ಫ.

ರಾಮನವಮಿ ಸಂಜೆ ತಾಯಿ ಅಡುಗೆ ಮನೆಯಲ್ಲಿ ನೋಡುತ್ತಾಳೆ, ತನ್ನ ೧೦ ವರ್ಷದ ಮಗನಿಗೆ ಹಿಂಗಟ್ಟುಮುರಿ ಹಾಕಿ, ಬಾಯಲ್ಲಿ ಬಟ್ಟೆ ತುರುಕಿದೆ; ಶ್ರೀಕರಣೆಯಲ್ಲ ಮಾಯವಾಗಿದೆ. ತಾಯಿ ಇನ್ನುಮೇಲೆ ಮಗನನ್ನು ಹುಷಾರಾಗಿ ನೋಡಿಕೊಳ್ಳುವುದಕ್ಕೋಸ್ಕರ ಸಿನಿಮಾಗಳಿಗೆ ಕಳುಹಿಸುವುದಿಲ್ಲವಂತೆ.



ಸ್ತ್ರೀ ವಿದ್ಯಾಭ್ಯಾಸ

ನನ್ನಾಕೆಗೆ ನನ್ಮೇಲೆ ಈಗ ಏಳೆಂಟು ದಿನಗಳಿಂದಲೂ ಕೋಪ—ಇದ್ದ ಒಬ್ಬ ಅಡಿಗೆಯವನನ್ನೂ ತಪ್ಪಿಸಿಬಿಟ್ನಲ್ಲಾಂತ. ನನ್ನ ಹೆಣ್ಣುಮಕ್ಕಳಲ್ಲಿ ಸರೋಜ ಇಂಟರ್‌ನಲ್ಲಿದ್ದಾಳೆ, ಜಯ ಎಸ್.ಎಸ್.ಎಲ್.ಸಿ.ಗೆ ಕಟ್ಟುತ್ತಾಳೆ. ಇವರಿಬ್ರೂ ಅವರಮ್ಮನ ಸಹಾಯಕ್ಕೆ ಒದಗಬೇಕಾದ್ರೆ, ಅವಳು ಹದಿನೈದು ದಿನಗಳ ಮುಂಚಿನಿಂದ್ಲೂ ತಲೆಕೆಳಕಾಗಿ ನಿಂತು ತಪಸ್ಸುಮಾಡಿದರೇನೇ. ಈಗ್ಮೂರ್ದಿನದಿಂದ್ಲೂ ಅವಳ ಗೋಳು ಕೇಳೀ ಕೇಳೀ ಸಾಕಾಗಿ ಹೋಗಿದೆ ನಂಗೆ—"....ಅಲ್ಲಾಂದ್ರೇ! ಬೇಕುಬೇಕಾದಷ್ಟು ಲೇಖನಗಳು, ಕಥೆ, ನಾಟಕಗಳ್ನೆಲ್ಲಾ ಬರೆದು ಪ್ರಸಿದ್ಧಿಗ್ಬಂದಿದ್ದೀರಿ. ಇವಲ್ಲದೆ ಕಾಲೇಜ್ನಲ್ಲಿ ಚರಿತ್ರಾಧ್ಯಾಪಕಾಂತ ಹುಡುಗರ್ನ ತರಬೇತ್ಮಾಡಿ, ಸುಶಿಕ್ಷಕಾಂತ ಬಿರುದ್ಬೇರೆ. ಒಳ್ಳೆಯ ಕಸ್ತೂರಿ ಹಾಗೆ ದೇಶದೇಶ್ದಲ್ಲೆಲ್ಲಾ ಘಮ್‌ಘಮಾಯ್ಸಿ ಬಿಟ್ಟಿದ್ದೀರಿ. ಯಾವ ಪೇಪರ್ನೋಡ್ಲೀ, ನಿಮ್ಹೆಸ್ರು ಇದ್ದೇ ಇರುತ್ತೆ. ಅಮಾನುಷ ವ್ಯಕ್ತಿ, ಮನೇಲ್ಹುಟ್ಟಿದ ಹೆಣ್ಮಕ್ಳ ಸೊಂಟ ಮುರ್ಯೋ ಮಾರ್ಗಾನ ಮನೇಲ್ಹೊದ್ದುಮಾಡಿ ಎಲ್ಲರಿಗೂ ತೋರ್ಸೋದಲ್ಲೇ ಮೊದಲ್ನೇ ಕೆಲಸ ನಿಮ್ದೂ"ಂತ ಅತಿಕಲ್ಮಶೀ ಬಿರುಸಿನಹಾಗೆ ಪ್ರಾರಂಭಿಸಿಬಿಟ್ಳು. ನಂಗಂತೂ, "ಕಾಲೇಜ್ನ ಚರಿತ್ರಾಧ್ಯಾಪಕ್ನಾಗಿ, ಹೆಸರುವಾಸಿ ರಾಜಾರಾಯನಾದ್ನಾನು, ಚರಿತ್ರೇ ಪಾಠಮಾಡೋವಾಗ್ಲೂ, ಈಥಾಟೀ ಉಪಯೋಗ್ಸೊಲ್ವಲ್ಲಾ, ಇಂಥಾವ್ನು ಮನೆಯಾಕೆಯ ಮೂರು ಡಜನ್ ಮಾತುಗಳಿಗೆ ಮುಗ್ರಿಸೋ ಸ್ಥಿತೀಗ್ಬಂದ್ಬಿಟ್ನಲ್ಲಾ"ಂತ ಅನ್ನಿಸಿತು—"ಲಕ್ಷ್ಮೀ! ಸುಮ್ನಿರ್ತೀಯೋ ಇಲ್ಲಾ ಒಂದ್ಹಗ್ಗ ಕೊಡ್ಲೀಯೋ ನನ್ನಕುತ್ತಿಗ್ಗೇ"ಂತ ಅಬ್ಬರಿಸಿದೆ. "ಬೇಜಾರ್ಪಟ್ಕೋಬೇಡೀಂದ್ರೆ. ನಾಹೇಳ್ತಿರೋದು ನನ್ನನ್ನೂಲಕ್ಕಲ್ಲ. ನಿಮ್ಮನುಕೂಲಕ್ಕೇನೇ ವೇಯೆ. ಈ ತಿಂಗ್ಳೇನೋ, ಇನ್ನೂ ಆರೇಳು ದಿನ ಸುಧಾರಿಸ್ಕೊಂಡೀರಿ. ಆಮೇಲ್ಹೊತ್ತಾಗುತ್ತೆ ಯಜಮಾನ್ರ ಬೇಳೇಕಾಳು. ಯಾಕ್ಹೊತ್ತೇ? ನೀವೇ ನಳ ಅಥವಾ ಅಜ್ಞಾತ ಭೀಮನಪಾತ್ರಾನ ವಹಿಸಲೇ ಬೇಕಾಗೋ ಸಂದರ್ಭ, ಮೂರೇ ಮೂರು ದಿನಕ್ಕಾದ್ರೂ ಬಂದೀತೂಂಬೋ ದೂರಾಲೋಚನೆಯಿಂದ ನಾನ್ಹೇಳ್ತಿರೋದು." ಅಂತಂದು ಸಿಟ್ಟಿಗೆ ಸೊಟ್ಮೋರೆ ಮಾಡ್ಕೊಂಡ್ನುಡೀ

ತಿದ್ದಳು, ಲಕ್ಷ್ಮಿ, ಹಾಗೇ ಯೋಚಿಸ್ದೆ, ನಂಗೂನೂ ಲಕ್ಷ್ಮಿ ಹೇಳಿದ ಅರ್ಥ ಹೊಳೀತು—"ಹೌದ್ಲಾದು. ಅವಳು ಹೇಳಿದ್ದೆಲ್ಲಾ ನಿಜ. ಲಾಗಾಯ್ತಿನಿಂದ ಇವಳಾಡಿದ್ದೆಲ್ಲಾ ಕೇಳಿಕೇಳೀ ಜಳ್ಳೂಂತ ಭಾವಿಸ್ಕೊಂಡ ನನ್ನ ಮಿದುಳು, ಅಲ್ಲಿ ನನ್ನಂಡೇನೇ ಜಳ್ಳೂ"ಂತಂದ್ಕೊಂಡು, ಮುಂದೊದಗಲೇ ಒದಗುವ ಮೂರ್ದಿನದ ನಾಕಶಾಸ್ತ್ರಚಾರ್ಯನ ಪಾತ್ರನಿರಾಕರಣೆಗೆ ಯೋಚಿಸಿ ಯೋಚಿಸಿ ಕಂಗೆಟ್ಟೆ.

ಕಡೇಗೆ ಒಂದು ನಿರ್ಧಾರಕ್ಬಂದೆ. ಲಕ್ಷ್ಮಿ ಹೇಳಿದಂತೆ, ನಾನ್ಮಾಡೋ ಪ್ಲಾನು ನಂಗೊಬ್ಬಿಗೇ ಅಲ್ಲ, ಇಡೀ ಮಾನವ ಜನಾಂಗಕ್ಕೇನೇ, ಇಡೀ ಗಂಡು ಲೋಕಕ್ಕೇನೇ ಉಪ್ಕಾರವಾಗುವಂಥಾ ಯೋಜನೆ. ನನ್ನ ಹಿಂದಿನ ಕಥೆಗಳಿಂದ, ಉಪನ್ಯಾಸಗಳಿಂದ ಎಷ್ಟೋ ಸಂಸಾರನಂದಿಗರ ಮುರಿದ್ಮನೆಗಳು ಮತ್ತೆ ಕೂಡಿವೆ; ಜೀವನವೇ ಬೇಸರವೆನಿಸಿ, ಮನೆಬಿಟ್ಟು ಹಾಳಾದ ಸನ್ಯಾಸಿಗಳಿಗೂ, ಜೀವನ ಸಿಹಿಯಾಗಿ ಪರಿಣಮಿಸ್ಸಿ, ನನ್ನ ಲೇಖನಗಳಿಗೆ ಭಾರೀ ಬಹುಮಾನವೇ ಸಿಕ್ಕಿದೆ. ಅದ್ರಿಂದ, ಹಿಂದಣ ಈ ಜಯಭೇರೀನ ಮನಸ್ನಲ್ಲೇ ನೆನೆಸ್ತಾ, ಬೆನ್ನುತಟ್ಕೊಂಡು ನನ್ಮುಂದಿನ ಕಾರ್ಯಕ್ರಮಾನ ಉತ್ತೇಜಿಸಿದೆ. ಅದಕ್ಸರಿಯಾಗಿ ಅದೂನೂ ಹೊಳೀತು— "ನಮ್ಮನೆಗಳಲ್ಲಿ ಈ ಕಾಲ್ದಲ್ಲಿ ಹೆಣ್ಮಕ್ಳ ಸೊಂಟ ಬಗ್ಗದೆ, 'ಷಟಂ' ಅಂತ ನೆಟ್ಟಗೇ ನಿಂತ್ಕೊಂಡಿರೋಕೆ ಮೂಲಕಾರಣ, ಈಗಿನ ಹಾಳು ವಿದ್ಯಾಭ್ಯಾಸ— ಮುಖ್ಯಕಾರಣ— ಈಗ್ನಾವು ನಮ್ಮ ಮಕ್ಕಳಿಗ್ಕೊಡ್ತೀರೋ ಶಿಕ್ಷಣ, ಅವರು ಮುಂದೆ ಸೌಖ್ಯವಾಗಿ ಸಂಸಾರಿಗಳಾಗಿ ಬಾಳುವುದಕ್ಕಲ್ಲ— ಮುಖ್ಯ 'ಸ್ತ್ರೀಮುಖಪುರುಷ'ರಾಗುವುದಕ್ಕೆ ಇದರಿಂದ ಗಂಡುಲೋಕದ ಗಂಟಲಿಗೇ ಗಾಣ. ಇದಕ್ಕೆ ಹೇಗಾದ್ರೂ ಕೊಡಲಿಪೆಟ್ಟು ಹಾಕ್ಲೇಬೇಕೂ'ಂತಂದ್ಕೊಂಡು, ತಕ್ಷಣವೇ ಒಂದು ದೊಡ್ಡ ಉಪನ್ಯಾಸಲೇಖನಾನ ತಯಾರಿಸಿದೆ —ಹೆಸರು—"ಸ್ತ್ರೀ ವಿದ್ಯಾಭ್ಯಾಸ".

ನಮ್ಮ ಯೂನಿಯನ್ನಿನ ಸೆಕ್ರೆಟರಿ, ರತ್ನಸಭಾಪತಿ, ದುಡ್ಡುಖರ್ಚುಮಾಡಿ ಓಟುಗಳಿಸಿದ ವೀರಾಗ್ರೇಸರ, ಹೆಸರು ಚೆನ್ನಾಗಿದ್ರೂ, ಸಭೆಯಲ್ಲಿ ಅವನೊಂದು ಅಪೂರ್ವ ರತ್ನಾನೆ. ವಂದನಾರ್ಪಣೆಯ ಕಾಲವ್ಮಿನ ಶೂರ, ಅವನು; ಎರಡ್ಮೂರು ಮಾತನಾಡೋಷ್ಟ್ರಲ್ಲೇ ಬೆವತು ನೀರಾಗಿ. ಮೂರ್ಛೆ ಬೀಳಬಹುದೆಂದು ಅರಿತೋ ಏನೋ, ತನ್ಪಕ್ಕದಲ್ಲಿ ಒಬ್ಬ ಪಂಕಾಬೀಸೋನ್ನ ತಯಾರಿಸ್ಕೊಂಡೇ ವೇದಿಕೆಯಮೇಲೆ ಅವನು ನಿಲ್ಲೋದು. ಇಂತಹ ಧೀರ, ನನಗೆ ಶಿಷ್ಯೋತ್ತಮ ಅವನಿಗೆ ಹೇಳಿದೆ, "ಬೃಹಸ್ಪತಿವಾರ, ನನಗೆ ಗುರುಬಲ ಚೆನ್ನಾಗಿರುತ್ತೆ-ವಿಮೆನ್ಸ್ ಕಾಲೇಜ್ನಲ್ಲಿ ಉಪನ್ಯಾಸಾನ ಏರ್ಪಡಿಸು. ಉಪನ್ಯಾಸಕ್ಕೆ ವಿಷಯ, "ಸ್ತ್ರೀವಿದ್ಯಾಭ್ಯಾಸ".

ಸರಿ, ನಾನ್ಹೇಳ್ದ್ಹಾಗೆ, ರತ್ನಸಭಾಪತಿ ನನ್ನ ಭಾಷಣದ ವ್ಯವಸ್ಥೇನ ಮಾಡಿ ಬಿಟ್ಟ. ಮೊದ್ಲೇ ಹೇಳಿದ್ನಲ್ಲಾ, ನನ್ನ ಭಾಷಣ, ನಮ್ಮನೇ ಹುಡುಗೀರ ಮುಂದೆ ಹೇಗಿರುತ್ತೆ, ನೋಡ್ಬೇಕೊಂತ, ನನ್ನ ಇಬ್ಬರು ಪುತ್ರಿಯರನ್ನೂ ಕರೆದು, ಓದಿದೆ. ಅವ್ರು ಕಿವಿಗೊಟ್ಟು ಕೇಳಿ, "ಬಹಳ ಚೆನ್ನಾಗಿದೇಣ್ಣ ಬಲ್ಚೆನ್ನು ವಾರ್ಧಾ ಸ್ಕೀಂ ಇದ್ರವುಂದೆ ಬಳ್ಳು. ನಮುಗ್ಯಾಕಣ್ಣ ಈ ಹಾಳು ವಿದ್ಯಾಭ್ಯಾಸ ಸರಿಯಾದ ಶಿಕ್ಷಣ ಕೊಡೊವಗೂರ್, ಈಸರ್ತಿ ಕಾಲೇಜ್ ಬಿಟ್ಮೇಲೆ ತಿರುಗೀ ಕಾಲ್ಹಾಕಿದ್ರೆತಾನೇ ಕಾಲೇಜ್ಗೇ''ಂತ ಸರೋಜ ಹೊಗಳಿದಳು. ಜಯಾ ಅಂತೂ, "ಈ ಸರ್ತಿ S. S. L. C. ಮುಗಿದ್ಮೇಲೆ ಕಾಲೇಜಿಗ್ಯಾಕಣ್ಣ ನಾನ್ಹೋಗ್ಬೇಕು ? ನೀನೇನ್ಹೇಳ್ಕೊಡ್ತೀಯೋ ಅದ್ನೆ ಮನೇಲಿ ಕಲಿತರೆ ಆಗ್ದೇನಣ್ಣ. ತಂದೆಗಿಂತ್ಲೂ ಗುರೂ ಒಬ್ನುಂಟೇ ''ಂತ ನನ್ನನ್ನ ಕೊಂಡಾಡ್ಬಿಟ್ಳು. ನಂಗೂ ಮಿತಿಮೀರಿದ ಆನಂದ್ವಾಗಿ, ಲಕ್ಷ್ಮೀಗೆ ಹೇಳಿದೆ— "ಲಕ್ಷ್ಮೀ ನೋಡಿದ್ಯಾ ! ಸುಮ್ನೆ ಅಂತೀಯಾ ಇವರ್ನ. ಇಂಥಾ ಚಿನ್ನದಂಥಾ ಮಕ್ಳು ಇನ್ನ್ಯಾರಮನೇಲುಂಟೂ ? "ಂತಂದು ಸುಮ್ಮನಾದೆ.

ಸಂಜೆ ಭಾಷಣಕ್ಕೆ ಬೇಗಬೇಗನೇ ಹೋದೆ. ಎಂದಿನಂತೆ ನನ್ನ ಲೆಕ್ಚರ್‌ಗೆ ಸಾವಿರ, ಅಲ್ಲ ಎರಡೋ ಮೂರೋ ಸಾವಿರ ಜನ ನೆರೆದಿದ್ದಾರೆ, ಅಂಗಳದಲ್ಲಿ ನಲ್ಲಿ. ಜತೇಗೆ ರತ್ನಸಭಾಪತಿ 'ಲೌಡ್ ಸ್ಪೀಕರ್' ವ್ಯವಸ್ಥೇನೂ ಮಾಡಿದ್ದಾನೆ. ಸಭಿಕರಲ್ಲಿ ಯಾರ್ಕಡೇ ನೋಡಿದ್ರೂ ಜಡಾಧಾರಿಗಳೇ, ಹಣೆಗೆ ಕುಂಕುಮ ವಗ್ಗೈರೆ ಹಚ್ಕೊಂಡಿರೋರೆ. ಎಲ್ಲೋ ಅಲ್ಪಸ್ವಲ್ಪ ಜನ ಗಂಡಸರು.

ನನ್ನ ಎರಡುಗಂಟೆಯ ಭಾಷಣದಲ್ಲಿ, ಸೀತೆ, ಸಾವಿತ್ರಿ, ಲೋಪಾಮುದ್ರೆ, ದ್ರೌಪದಿ, ಅನುಸೂಯುಗಳೂ, ಗೃಹಕೃತ್ಯ, ಅಡಿಗೆಮನೆ, ಆರೋಗ್ಯಜೀವನ, ಮನೆ, ಮಕ್ಕಳು, ಭಾರತ ಮತ್ತು ರಾಮಾಯಣ ಗಂಟೆಗೆ ಅರವತ್ತುಸಲ ಪ್ರವೇಶಿಸಿ, ಪ್ರತಿಸಲವೂ ಹರ್ಷಧ್ವನಿಗಳೂ, ಚೀತ್ಕಾರಗಳೂ, ಚಪ್ಪಾಳೆಗಳೂ ತಪ್ಪದೇ ಬಂದುವು. ಕೆಲವುಕಡೆ ನನ್ನ ಹಾಸ್ಯದ ಚಟಾಕಿಗಳನ್ನು ಕೇಳಿ ಕೇಳಿ, ನಗೆ, ಉಪನಗೆಗಳಿಗಂತೂ ಬಿಡುವೇ ಇರಲಿಲ್ಲ. ಭಾಷಣ ಮುಗಿದ್ಮೇಲೆ, ನನ್ನ ಸ್ನೇಹಿತರೂ, ಕಾಲೇಜ್ ಹುಡುಗರೂ, ನನ್ನ ಕೈ ಕುಲುಕಿ ಕುಲುಕಿ ಸುಸ್ತಾದರು. ಆದರೆ ಸ್ತ್ರೀಯರಲ್ಲಿ ಒಬ್ರೂ ನನ್ಭಾಷಣವನ್ನು ಮೆಚ್ಚಿ ತಮ್ಮ ಅಭಿಮಾನವನ್ನು ಸೂಚಿಸಲೇ ಇಲ್ಲ. ಆದರೆ, ನನಗೆ ನಾನೇ "ಲೆಕ್ಚರ್ ಎಂದರೆ ಅಸಾಧ್ಯ ಲೆಕ್ಚರು, ಏನು ಜನಸಂದಣಿ, ಏನುವೈಭವ ಏನುಕಥೇ ? ಎಂಥಾಗಂಡುಬೀರಿ, ಅಮೆಜಾನಳ ಎದೆಯೂ ಕರಗಿ ಕರಗಿ, ಗೃಹಿಣಿ ಎನ್ನಿಸ್ಕೊಳ್ಳಬೇಕೆಂಬ ಹಟ, ಹುರುಪುಗಳನ ಇಂಜೆಕ್ಷನ್‌ರೀತಿಯಲ್ಲಿ ರಕ್ತಗತವಾಗುವಂತೆ ಮಾಡುವ ನನ್ನ ಶಬ್ದ ವೈಖರಿಯ ಮಾಯಾಜಾಲವೇ ನನ್ನ ಉಪನ್ಯಾಸ. ಭೇಷ್, ಶಹಭಾಸ್ '' ಎಂದು ಸಕಂಡು

ಸೆಕೆಂಡಿಗೂ ಹೊಗಳಿಕೊಳ್ತಾ ಮನೆಗೆ ಬಂದೆ. ಪುನಃ ಮನೆಯಲ್ಲಿ, ಲಕ್ಷ್ಮಿಯ ಎದುರಿಗೆ ರಂಡೋಲ್ ಭಾರಿಸಿದೆ.

ಮಾರನೆಯ ದಿನವೇ, ಆಕಾಶವಾಣಿಯವರಿಂದ ಅದೇ ಉಪನ್ಯಾಸಕ್ಕೆ ಆಹ್ವಾನ. ಹುರುಪಿನ್ಮೇಲೆ ಹುರುಪುಬಂದು, ಪ್ರತಿಮನೆಯ ಮೂಲೆಮೂಲೆಗೂ ಹರಡಿಬಿಟ್ಟೆ ನನ್ನ ಭಾರೀ ಔಷಧೀನ, ಬ್ರಾಡ್‌ಕ್ಯಾಸ್ಟ್ ಮೂಲಕ.

ಇದಾದ ಎರಡನೆಯ ದಿನ ಇನ್ನೂ ಬೆಳಗ್ಗೆ ಆರುಘಂಟೆ ಕೂಡ ಆಗಿರ್ಲಿಲ್ಲ! ನಾನೇಳೋಕೆ ಮುಂಚೆಯೇ ಲಕ್ಷ್ಮಿಯ ಅಲಾರಂ—“ಏಳೀಂದ್ರೇ, ಎಷ್ಟೊತ್ತ್ಮಲ ಗಿರೋದು? ಹೀಗೇ ನಿದ್ದೆಮಾಡ್ತಿದ್ರೆ, ನಿಮ್ಮಾಲೇಜ್ಹೊತ್ತಿಗೆ ಅಡಿಗೆ ಆಗ್ಬೇಡ್ವೇ? ನಾನಂತೂ ಈಚೆಕೂತ್ಬಿಟ್ಟೆ ಇನ್ನಿಮ್ಮಕ್ಕಳೋ ಪರೀಕ್ಷೇಂತ ಗೊಣಗುಟ್ತಿದ್ದಾರೆ. ಇದಕ್ಕೇ ನಾನ್ಪಡುಕೊಂಡದ್ದು, ಅಡಿಗೆಯವನ್ಯಾಕೆ ಓಡಿಸ್ತೀರೀಂತ.” ಹೀಗೆಂದು ಸುಮ್ಮನಾದಳು. “ಮೂರ್ಸಲ ನನ್ಭಾಷಣಾನ್ಕೇಳಿರೋ ನನ್ನ ಮಕ್ಕಳು ನನ್ನನ್ನ ಗಂಡ್ಸನ್ನ ಇವತ್ತಡಿಗೇಮನೇಗೆ ಹ್ಯಾಗ್ಕಳಿಸ್ತಾರೇ”ನ್ನೋ ಧೋರಣೆಯಿಂದ ಅವಳ್ಮಾತ್ನೂ ಅಲಕ್ಷಿಸಿ ಮುಸುಕ್ಹಾಕ್ಕೊಂಡೆ.

ಎದ್ದು ಮುಖತೊಳೆದು, ‘ರೂಮಿ’ಗೆ ಬಂದೆ. ಕಾಫಿ ಇಡ್ಲಿ ತಯಾರು. ನನ್ನ ಪ್ರತಿದಿನದತಿಂಡಿಯೇ ಇವತ್ತೂ ತಯಾರಾಗಿರೋದ್ನ ನೋಡಿ, ಮನಸ್ನಲ್ಲೇ ಸರೋಜನ್ನ ಹೊಗಳಿದೆ. ಅಂತೂ ನನ್ಭಾಷಣ ಎಂದೂ ಪರಿಣಾಮಕಾರಿ ಅಂತ ಹೆಸ್ರು ಪಡೆದಿರೋ ನನ್ನ ಲೆಕ್ಚರ್ ಸಾರ್ಥಕತೇನ ಕಂಡು ಹಿಗ್ಗಿದೆ. ಕಾಫಿ ಕುಡಿದ್ಮೇಲೆ ತಿಳೀತು—ತಿಂಡೀ ಕಾಫೀ ಹೊಟೇಲ್ನಿಂದ ಬಂದದ್ದೂಂತ—ಗುಂಡಿಗೆ ಬಿರಿದ್ಹಾಗಾಯ್ತು. ತಿಂದದ್ನೆಲ್ಲಾ ವಾಂತಿಮಾಡೋಷ್ಟು ಸಂಕಟ ಬಂತು—“ಅಬ್ಬಾ, ಈಗಿನ್ಕಾಲದ ವಿದ್ಯಾಭ್ಯಾಸದ್ಪರಿಣಾಮ ಎಷ್ಟುಮಟ್ಗದೆ. ಇನ್ನು ಊಟಾನೂ ಹೋಟ್ಲಿಂದ್ಲೇ ತರಿಸ್ಬಿಡ್ತಾರೀ ಕಿರಾತಕೀಗ್ಳೂಂತ. ಸರೋಜನ್ನ ಕೂಗಿದೆ— “ಸರೋಜಾ! ಹೀಗೇ ಕೂತಿದ್ರೆ ಎಷ್ಟೊತ್ತ್ಗೇ ಅಡಿಗೆಯಾಗೋದೂ? ಕಾಲೇಜಿಗೆ ನಂಗೂ ಹೊತ್ತಾಗೊಲ್ವೇನೇ? ಕಾಫೀನೇನೋ ಹೋಟ್ಲಿಂದ ತರಿಸ್ಬಿಟ್ರೆ, ಊಟಾನೂ ತರಿಸೋಣಾಂತಂದ್ರೆ ನಂಗೆ ಹೋಟ್ಲೂಟ ಆಗೊಲ್ಲ. ನಿಮ್ಮಮ್ಮನಿಗಂತೂ “ಊಹು....” ಇನ್ನೂ ನನ್ಮಾತು ಮುಗಿಯೋಷ್ಟ್ರಲ್ಲೇ—“ಅಣ್ಣಾ. ಇವತ್ಪರೀಕ್ಷೇನ್ನೋದು ನಿಂಗೂಗೊತ್ತು. ಅದೂ ಸೆಲೆಕ್ಷನ್ಪರೀಕ್ಷೆ. ಇವತ್ತು ಬ್ರಿಟಿಷ್ ಹಿಸ್ಟ್ರಿ, ನಾಳೇ ಗ್ರೀಕು, ನಾಡಿದ್ದು ರೋಮನ್ ಹೀಗೆ ಈಸರ್ತಿ ಮೂರು ಪೇಪರೂಣ್ಣ, ಚರಿತ್ರೆ ನಿನ್ನ ಪಾಠ. ಆದ್ರಲ್ಲಿ ಫೇಲಾದ್ರೆ ನಿಂಗೇ ಅವಮಾನ್ವಲ್ವೇ? ಆದ್ರಿಂದ ಜಯನಿಗ್ಹೇಳಣ್ಣಾ”ಂತ ಅಂದ್ಳು. ನಾನೂ ಎಷ್ಟೋ ಹೇಳಿದೆ. “ಗೋಪಾಲಸಾಮಿ ನನ್ನ ಖಾಸಾ ಸ್ನೇಹಿತ. ಒಂದ್ವೇಳೆ

ನೀನು ಸರಿಯಾಗಿ ಮಾಡ್ಬಿದ್ರೆ, ನಂಬರು ಹೆಚ್ಚಾಗಿಯೇ ಹಾಕಿಸ್ತೇನೆ. ಅಥ್ವಾ ಪೇಪರ್ ಕರೆಕ್ಷನ್ನಿಗೆ ನನ್ಹತ್ರಾನೇ ಬಂದ್ರೆ ಇನ್ನೂ ಅನ್ಕೂಲಾ ''ಂತ ಎಷ್ಟೋ ಊದಿದೆ. ಏನು ಹೇಳಿದರೂ "ಉಹು" ಜಯನ್ನ ಕೂಗಿದೇಟಿಗೆ, ಅಲ್ಲಿಂದ್ಲೇ! "ಅಣ್ಣಾ ಈವತ್ತು ಲೆಕ್ಕದ ಪೇಪರೂಣ್ಣಾ. ಗಣಿತದಲ್ಲಿ ನೀನೆಷ್ಟು ಸುಸ್ತೋ ಓ ನಾನೂ ಅಷ್ಟೆ. ಅದ್ರಿಂದ ದಯವಿಟ್ಟು ಗಲಾಟೆ ಮಾಡ್ಬೇಡಾಣ್ಣಾ''ಂತ ಒಂದೇ ಉಸುರಿಗೆ ಗುಡುಗಿದಳು, ಜಟ್ಕಾಸಾಬಿ ಕುದುರೇನ ಗ್ಯಾಲಪ್‌ಮಾಡ್ಸೋಕೆ, ಚಾಟಿಕೋಲ್ನಿಂದ ಶಬ್ದಮಾಡ್ತಾನಲ್ಲಾ ಹಾಗೆ.

ಸರಿ, ಸುಸ್ತಾದೆ. ಲಕ್ಷ್ಮಿಗಂತೂ ಮನಸ್ನಲ್ಲೇ ನಗು. ಆಗಾಗ ನಂಗೆ ತೋರಿಬರುವಂತೆಯೇ ಒಳೊಳ್ಗೇ ನಗ್ತಿದ್ದಾಳೆ. ಹಾಗೆಯೇ ಯೋಚಿಸಿದೆ, 'ಇವೆಲ್ಲಾ ಸರಿಯಿಲ್ಲ. ನೆಟ್ಟಗೆ ಕೃಷ್ಣಮಾಚಾರಿ ಮನೇಲಿ ಕವಳ ಕತ್ತರಿಸಿ ಕಾಲೊಜ್ಗಡೆ ಕಾಲ್ಹಾಕಿದ್ರೆ, ಇವ್ರೆಲ್ಲಾ ಉಪ್ವಾಸಬಿದ್ದು ಸತ್ತು ನಾಳೆನಾದ್ರೂ ಬುದ್ಧಿ ಕಲೀಲೀ''ಂತ ಹಾಗೆಯೇ ಮಾಡಿದೆ. ಸಂಜೆಗೆ ಮನೆಗ್ಬಂದು ವಿಚಾರಿಸಿದರೆ, ಜಯಾ, ಸರೋಜ ತಮ್ಮ ಗೆಳತಿ ಲಲಿತಾ ಮನೇಲಿ ಊಟಮಾಡ್ಕೊಂಡು ಕಾಲೇಜ್ಗೋ ಸ್ಕೂಲಿಗೋ ಹೊರಟ್ಹೋದ್ರು. ಉಪವಾಸ್ದಿಂದ ನಾನ್ಬರೋವರ್ಗೂ ಕಂಗೆಟ್ಟು ಸಪ್ಪೆಮೋರೆ ಹಾಕ್ಕೊಂಡ್ಬಿದ್ದಿದ್ದಾಳೆ ಲಕ್ಷ್ಮಿ; ಎತ್ತಿಗೆ ಜ್ವರವಾದ್ರೆ ಕೋಣನಿಗೆ ಬರೆ ಹಾಕ್ದ್ಹಂಗಾಯ್ತು ನನ್ನೌಷಧಿ. ನೋಡಿದೆ, ಕನಿಕರ ಉಕ್ಕಿತು. ತಕ್ಷಣ ಒಲೆ ಹತ್ತಿಸಿ ಅಡಿಗೆಮಾಡಿ ಅವಳಿಗೆ ಬಡಿಸಿದೆ. ಅಂತೂ ಮೂರು ದಿವಸಗಳೂ, ಇನ್ನೊಬ್ಬ ಸೊಂಟ್ಮುರಿಯೋ ಔಷಧೀನ್ತಯಾರ್ಮಾಡಿದ ನಾನೇ ಸೊಂಟ ಬಗ್ಗಿಸಿಕೊಂಡು, ಅಡಿಗೆಮಾಡಬೇಕಾಯ್ತು. ವಿಧಿಯಿಲ್ಲ.

ರಾತ್ರಿ ಊಟವಾದ್ಮೇಲೆ ರೇಡಿಯೋ ತಿರುಗಿಸಿದೆ. ಮೈಸೂರು ಆಕಾಶವಾಣಿಯ ಪ್ರೋಗ್ರಾಮು, ಕೇಳಿಗರ ಕಾಗದಗಳು ಉ. ಆಗ್ಲೂ ನನ್ಮನಸ್ನಲ್ಲಿ, ನನ್ನೆಕ್ಷರ್ನ್ ವಿಷಯಾನ ಹೊಗಳಿ, ಯಾವನಾದ್ರೂ ಆಕಾಶವಾಣೀಗ್ಕಾಗ್ದ ಬರೆದಿರ್ತಾನೇಂತ ಹಂಬಲ ಹೆಚ್ಚಿ, ಕಿವಿಗೊಟ್ಟೆ, ಅದ್ರಲ್ಲೂ ಬಂದಿತ್ತು. ಮೈಸೂರು ಮಹಿಳೆಯರ ಸಂಘದಿಂದ ಬಂದ ಕಾಗದ. ಅದರ ಒಕ್ಕಣೆ ಹೀಗೆ:—"ಮೊನ್ನೆಯ, "ಸ್ತ್ರೀವಿದ್ಯಾಭ್ಯಾಸ''ದ ಭಾಷಣ ಕೇಳಿದಿವಿ. ಅದಕ್ಕೆ ಆ ಹೆಸರಿಗಿಂತ, "ಸ್ತ್ರೀ ವಿದ್ಯಾಭಾಸ'' ಎಂದರೆ ಸರಿಹೋದೀತು. ಇನ್ನುಮೇಲೆ ಇಂತಹ ಉಪನ್ಯಾಸಗಳಿಗೆ ರೇಡಿಯೋದಲ್ಲಿ ಎಡೆಕೊಡದೆ, ತುಂಡುಹಾಕೀ''ಂತ, ಬರೆದು, ಮುಂದೆ ಎಚ್ಚರಿಕೆ ಎಂದೂ ಬರೆದಿದ್ದರಂತೆ—"ಇನ್ನುಮೇಲೆ ಇಂಥಹ ಉಪನ್ಯಾಸಗಳನ್ನ ರೇಡಿಯೋ ಮೂಲ್ಕ ಬ್ರಾಡ್‌ಕ್ಯಾಸ್ಟ್ ಮಾಡಿದರೆ, ಸ್ತ್ರೀಯರೆಲ್ಲಾ ಸೇರಿ ಚಳುವಳಿ ಹೂಡಲೇ ಬೇಕಾಗುತ್ತೆ; ಎಚ್ಚೆತ್ತುಕೊಳ್ಳೀ''ಂತ. ನಂಗಂತೂ ಇದನ್ನು ಕೇಳಿ ಕೋಪ ಉಕ್ಕಿ, ತಕ್ಷಣವೇ ರೇಡಿಯೋವನ್ನು ನಿಲ್ಲಿಸಿಬಿಟ್ಟೆ.

ಇಷ್ಟೆಲ್ಲಾ ಹೇಳಿದ್ಮೇಲೆ, ನನ್ಕಾಲೇಜಿನಲ್ಲಾದ ಲೆಕ್ಚರಿನ ಪರಿಣಾಮವನ್ನು ಹೇಳಿದರೇನೇ ನನ್ಮನಸ್ಸಿಗ್ಸಮಾಧಾನ. ಆ ಕಾಲೇಜಿನ ಹುಡುಗಿಯರೆಲ್ಲಾ ಸೇರಿ, ಪ್ರಿನ್ಸಿಪಾಲ್‌ಗೆ ಸ್ವಲ್ಪ ದಿನಗಳಮೇಲೆ ಅರ್ಜಿ ಹಾಕಿದರಂತೆ—"ನಮಗೆ ಚರಿತ್ರಾಧ್ಯಾಪಕರು ಬೇಕೊಬ್ಬರು ಬೇಕು. ಈಗಿರುವ—ರಾಯರು ಪಾಠ ಪ್ರವಚನಗಳಲ್ಲೂ, ತಮ್ಮ ಅಮೋಘ ಭಾಷಣವನ್ನೇ ತಿರುತಿರಗೂ ಹೇಳುತ್ತಿದ್ದಾರೆ. ದಯವಿಟ್ಟು ಒಬ್ಬ (ಸ್ತ್ರೀ) ಉಪಾಧ್ಯಾಯಿನಿಯನ್ನೇ ಕಳುಹಿಸಿಕೊಟ್ಟರೆ ಉತ್ತಮ"—ಹೀಗಿತ್ತು ಅರ್ಜಿ. ಅಪ್ಲಿಕೇಷನ್ ಬಂದದ್ದೇ ತಡ, ವರ್ಗಮಾಡಿಬಿಟ್ರು ನನ್ನ.

ಹೀಗ್ನನ್ಮುಖಮುರಿದು. ಮರ್ಯಾದೆ ಮಾಡಿದರೂ ನಮ್ಕಾಲೇಜಿನ ವಿದ್ಯಾರ್ಥಿನಿಯರಿಗೆ ನನ್ಮೇಲಿನ್ನೂ ಕ್ರೋಧ ತಪ್ಪೇ ಇಲ್ಲ. ಈ ಹಾಳು ಉಪನ್ಯಾಸದ್ಪರಿಣಾಮ್ವಾಗಿ, ದೇಶಾದ್ಯಂತವೂ ನನಗೆ ಅಡ್ಡ ಹೆಸರನ್ನಿಟ್ಬಿಟ್ಟಿದ್ದಾರೆ. ಈಗೆಲ್ಲಿ ನೋಡ್ಲಿ, ನನ್ನನ್ನ ರಾಜಾರಾಯರು, ಚರಿತ್ರೆ ಮೇಷ್ಟ್ರು, ಕತೆಗಾರ, ಕವಿಸಾರ್ವಭೌಮಾಂತ ಕೂಗ್ತಿದ್ದ ನನ್ನ ಶಿಷ್ಯಪೀಳಿಗೆ, "ಸ್ತ್ರೀವಿದ್ಯಾಭ್ಯಾಸಾ"ಂತ್ಲೇ ನನ್ನನ್ನ ಕರೆಯೋದಕ್ಕೆ ಆರಂಭಮಾಡಿದೆ.

ಆದ್ರೆ ನೀವು ಯಾರೂ ದಯವಿಟ್ಟು, ಹಾಗ್ಕೂಗ್ಬಿಡ್ಬೇಡಿ, ನಿಮ್ಮದಮ್ಮಯ್ಯ—ರಾಜಾರಾಯ.

—"ಪಂಡಿತ್"

"ಮೋಟಾರುಗಳು ಜನರಮೇಲೆ ಬಿದ್ದು, ನೆಡವಿ, ನಿಲ್ಲದೆ ಹೊರಟು ಹೋಗುತ್ತವೆ" ಎಂಬ ದೂರು ಎಲ್ಲೆಲ್ಲೂ ಕೇಳುತ್ತಿದೆ. ಹೌದು. ಆದುದರಿಂದ ಈಗ ಮೋಟಾರುಗಾರರಿಗೆ ಅತ್ಯಗತ್ಯವಾಗಿರುವುದು ಒಂದು ಭಾರವಾದ, ಬಲವುಳ್ಳ, ಆದರೆ ಅನುವಶವಾದ ಮತ್ತು ಒಂದುಸಲ ದಾರಿಗನನ್ನು ತಿವಿದು, ಹಿಂದಿರುಗಿ ಪುನಃ ಅವನನ್ನು ತಿವಿದು ಮುಂದೆ ಹೋಗುವಂಥ ಮೋಟಾರ್ ಎಂದು ತಿಳಿದು ಬರುತ್ತದೆ.

✤ ✤ ✤

ಯುಗಾದಿ ಹಬ್ಬದ ದಿನ ತಮ್ಮ ಮನೆಗೆ ಹಣದ ಚೀಲ ಹಿಡಿದುಕೊಂಡು ಬರುವುದು ಒಳ್ಳೆಯ ಶಕುನವೆಂದು ಗುಜರಾತಿನಲ್ಲಿ ನಂಬಿಕೆಯಂತೆ.

✤ ✤ ✤




Toilet Soap



ಈದ್ ಮತ್ತು ದಸರಾ ಹಬ್ಬಗಳಿಗಾಗಿ ವಿಶೇಷ ಪ್ರದರ್ಶನ

ಕೆದಾರ್‌ರವರ - ಹಾಸ್ಯಮಯ ಚಿತ್ರ

** ಸಂಜೋಗ್ **



ಕೆಲಸದಬೇಟೆಗಾಗಿ ಬಂದವನನ್ನು ರಾಜಕುಮಾರಿಯು ಕೈಹಿಡಿಯಲು ಬಂದ ವರನೆಂದು
ತಪ್ಪಾಗಿ ತಿಳಿದುಕೊಂಡರೆ ? ಆರೀತಿ ಅವನನ್ನು ಆದರಿಸಿದರೆ !

ಎಂತಹ ಸ್ವಾರಸ್ಯವಾದ, ಹಾಸ್ಯಮಯವಾದ ಸನ್ನಿವೇಶ ?

ಈ ಸನ್ನಿವೇಶಕ್ಕೆ ತಕ್ಕಂತೆ ಚಾರ್ಲಿ, ವಾಸ್ತಿ ಇವರ ಅಭಿನಯ.

ಇವರ ಹಾಸ್ಯರಂಗದಲ್ಲಿ ಮೆಹತಾಬ್ ಸಿಕ್ಕಿಬೀಳುತ್ತಾಳೆ !

ನಿರ್ದೇಶಕ : ಎ. ಆರ್. ಕೆದಾರ್. ಸಂಗೀತ : ನೌಷದ್.

ಬೆಂಗಳೂರು ವಿಜಯಾ ಟಾಕೀಸಿನಲ್ಲಿ - ಮುಂದಿನ ಬದಲಾವಣೆ

ಹಂಚಿಕೆ : ಕಪೂರ್‌ಚಂದ್ ಅಂಡ್ ಕೊ, - - - ಬೆಂಗಳೂರು ಸಿಟಿ.

Printed by B. S. Iyengar, Bangalore City.
Publisher—B. N. Gupta, Editor—M. SHIVARAM.